ಸಂಪುಟ 01 | ಸಂಚಿಕೆ 150 ಬುಧವಾರ 05 ಆಗಸ್ಟ್ 2026 | ಪುಟ 4 | ಬೆಲೆ–2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತರರಾಷ್ಟ್ರೀಯ ಟ್ರಾಫಿಕ್ ಲೈಟ್ ದಿನ (International Traffic Light Day) ರಸ್ತೆ ಸುರಕ್ಷತೆ ಮತ್ತು ಸಂಚಾರ ನಿಯಂತ್ರಣದ ಮಹತ್ವವನ್ನು ನೆನಪಿಸುವ ದಿನ.

2) ವಿಶ್ವ ಸ್ತನ್ಯಪಾನ ವಾರ (World Breastfeeding Week) ? ಆಗಸ್ಟ್ 1–7ರವರೆಗೆ ನಡೆಯುವ ಈ ವಾರದಲ್ಲಿ ಆಗಸ್ಟ್ 5 ಕೂಡ ಸೇರಿದೆ. ತಾಯಿಯ ಹಾಲಿನ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ.

3) ವರ್ಕ್ ಲೈಕ್ ಎ ಡಾಗ್ ಡೇ (Work Like a Dog Day) ಶ್ರಮ, ಸಮರ್ಪಣೆ ಮತ್ತು ಪರಿಶ್ರಮವನ್ನು ಗೌರವಿಸುವ ದಿನ.

## ಸುಭಾಷಿತ

ಬೇವಿನ ಬೀಜವ ಬಿತ್ತಿ, ಬೆಲ್ಲದ
ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು,
ಜೇನುತುಪ್ಪವ ಹೊಯ್ದರೆ ಸಿಹಿಯಾಗಬಲ್ಲುದೆ,
ಕಹಿಯಹುದಲ್ಲದೆ?

–ಬಸವಣ್ಣ

## ನೂತನ ಸಚಿವರಿಗೆ ಬರ ಪರಿಸ್ಥಿತಿ ಅಧ್ಯಯನ ಜವಾಬ್ದಾರಿ ಹೊರಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು:** ರಾಜ್ಯದಲ್ಲಿನ ಅತಿವೃಷ್ಟಿ, ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ನೂತನ ಸಚಿವರಿಗೆ ಜಿಲ್ಲೆಗಳನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿಯೋಜಿಸಿದ್ದಾರೆ. ತಕ್ಷಣ ಪ್ರವಾಸ ಕೈಗೊಂಡು, ಖುದ್ದು ಪ್ರತಿಯೊಂದು ತಾಲ್ಲೂಕುಗಳಲ್ಲಿನ ಪರಿಸ್ಥಿತಿಯನ್ನು ಪರಿವೀಕ್ಷಣೆ ನಡೆಸಿ. ವಾಸ್ತವ ಸ್ಥಿತಿಯ ವರದಿಯನ್ನು ಕೂಡಲೇ ಉಪ ಮುಖ್ಯ ಮಂತ್ರಿ ಹಾಗೂ ಕಂದಾಯ ಸಚಿವರಿಗೆ ಸಲ್ಲಿಸುವಂತೆ ಸೂಚಿಸಿದ್ದಾರೆ.

"ಸಚಿವ ಸಂಪುಟ ವಿಸ್ತರಣೆಯಾಗುವ ಹಿನ್ನೆಲೆಯಲ್ಲಿ ಸ್ಥಳೀಯ ನಾಯಕರಿಂದ ಪರಿಹಾರ ಘೋಷಣೆ ಮಾಡಿಸಲು ತೀರ್ಮಾನಿಸಿದ್ದೇವೆ. ನಾಳೆಯಿಂದ ನೀವುಗಳು ನಿಮಗೆ ಜವಾಬ್ದಾರಿ ವಹಿಸುವ ಜಿಲ್ಲೆಗಳಿಗೆ ಹೋಗಿ, ಅತಿವೃಷ್ಟಿ ಹಾಗೂ ಅನಾವೃಷ್ಟಿ ಬಗ್ಗೆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಬೇಕು. ನಂತರ ಕಂದಾಯ ಸಚಿವರಿಗೆ ವರದಿ ನೀಡಬೇಕು. ವಿರೋಧ ಪಕ್ಷದ



ನಾಯಕರು ಅಧಿವೇಶನ ನಡೆಸಲು ಬಿಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅವರು ಕಂದಾಯ ಸಚಿವರಾಗಿದ್ದವರು. ಸಾಕಷ್ಟು ಅನುಭವಸ್ಥರು. ಅವರಿಗೆ ಸಮಯ ಬಂದಾಗ ಉತ್ತರ ನೀಡೋಣ. ನಾನು ಈಗಾಗಲೇ ಬೆಳಗಾವಿ, ಚಿತ್ರದುರ್ಗ, ಕಲಬುರಗಿ ವಿಭಾಗಗಳಲ್ಲಿ ಸಭೆ ಮಾಡಿದ್ದು, ಮೈಸೂರು ವಿಭಾಗದ ಸಭೆಯನ್ನು ಶೀಘ್ರವೇ ಮಾಡಲಾಗುವುದು. ಎಲ್ಲರ ಸಲಹೆ ಪಡೆಯಲಾಗಿದ್ದು, ಕುಡಿಯುವ ನೀರಿನ ಉದ್ದೇಶಕ್ಕೆ ಪ್ರತಿ ವಿಧಾನಸಭೆಗೆ 1 ಕೋಟಿ ಅನುದಾನ ನೀಡಲಾಗಿದೆ. ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಹೋಗಿ ವರದಿ ನೀಡಬೇಕು. ನಂತರ ಸರ್ಕಾರ ತೀರ್ಮಾನ ಮಾಡಲಿದೆ. ಎಲ್ಲಾ ಪಕ್ಷದ ಜನಪ್ರತಿನಿಧಿಗಳನ್ನು ಕರೆದುಕೊಂಡು ಹೋಗಿ ಪರಿಶೀಲನೆ ಮಾಡಬೇಕು ಎಂದು ಸೂಚನೆ ನೀಡಲಾಗಿದೆ" ಎಂದು ಮಾಹಿತಿ ನೀಡಿದರು.

### ಸಚಿವರಿಗೆ ಹಂಚಿಕೆ ಮಾಡಿರುವ ಜಿಲ್ಲೆ

| | |
|---|---|
| ಡಾ. ಜಿ. ಪರಮೇಶ್ವರ – ತುಮಕೂರು, | ಬಸವರಾಜ ರಾಯರೆಡ್ಡಿ – ಗದಗ |
| ರಘುಮೂರ್ತಿ –ಚಿತ್ರದುರ್ಗ | ಎಸ್.ಎಸ್. ಮಲ್ಲಿಕಾರ್ಜುನ – ದಾವಣಗೆರ |
| ಬಿ.ಎಸ್. ಸುರೇಶ್ (ಭೈರತಿ) – ಚಿಕ್ಕಬಳ್ಳಾಪುರ | ರುದ್ರಪ್ಪ ಲಮಾಣಿ – ಹಾವೇರಿ |
| ಕೆ.ಹೆಚ್. ಮುನಿಯಪ್ಪ – ಬೆಂಗಳೂರು ಗ್ರಾಮಾಂತರ | ಸತೀಶ್ ಜಾರಕಿಹೊಳಿ – ಬೆಳಗಾವಿ |
| ರಾಮಲಿಂಗಾ ರೆಡ್ಡಿ – ಕೋಲಾರ | ಸಂತೋಷ್ ಲಾಡ್ – ಧಾರವಾಡ |
| ಹೆಚ್.ಸಿ. ಬಾಲಕೃಷ್ಣ – ಬೆಂಗಳೂರು ದಕ್ಷಿಣ | ಲಕ್ಷ್ಮಣ ಸವದಿ – ಉತ್ತರಕನ್ನಡ |
| ಬಿ.ಜೆಡ್. ಜಮೀರ್ ಅಹ್ಮದ್ ಖಾನ್ – ಜಯನಗರ | ಪ್ರಿಯಾಂಕ್ ಖರ್ಗೆ – ಕಲಬುರಗಿ |
| ಕೆ.ಜೆ. ಜಾರ್ಜ್ – ಚಿಕ್ಕಮಗಳೂರು | ಅಜಯ್ ಧರಂ ಸಿಂಗ್ – ರಾಯಚೂರು |
| ಕೆ.ಎಂ.ಶಿವಲಿಂಗೇ ಗೌಡ – ಹಾಸನ | ಈಶ್ವರ್ ಖಂಡ್ರೆ – ಬೀದರ್ |
| ಮಧು ಬಂಗಾರಪ್ಪ –ಶಿವಮೊಗ್ಗ | ಯು.ಟಿ.ಖಾದರ್ – ದಕ್ಷಿಣ ಕನ್ನಡ & ಉಡುಪಿ |
| ವಿಜಯಾನಂದ ಕಾಶಪ್ಪನವರ – ಬಾಗಲಕೋಟೆ | ಪಿ.ಎಂ.ನರೇಂದ್ರಸ್ವಾಮಿ –ಕೊಡಗು |
| | ಯತೀಂದ್ರ ಸಿದ್ದರಾಮಯ್ಯ – ಮೈಸೂರು |

## ನೂತನ ಸಚಿವ ಶ್ರೀ ವಿಜಯಾನಂದ ಕಾಶಪ್ಪನವರರಿಗೆ ಶುಭಕೋರಿದ ಧಾರ್ಮಿಕ ಮುಖಂಡ ಜನಾಬ್ ಸಯ್ಯದ್ ಶಕೀಲ್ ಅಹ್ಮದ್ ಖಾಜಿ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕರ್ನಾಟಕ ಸರ್ಕಾರದ ನೂತನ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಶ್ರೀ ವಿಜಯಾನಂದ ಕಾಶಪ್ಪನವರಿಗೆ, ತಾಳಿಕೋಟಿಯ ಧಾರ್ಮಿಕ ಮುಖಂಡರಾದ ಜನಾಬ್ ಸಯ್ಯದ್ ಶಕೀಲ್ ಅಹ್ಮದ್ ಖಾಜಿ ಅವರು ಶಾಲು ಹೊದಿಸಿ ಹಾಗೂ ಪುಷ್ಪಮಾಲೆ ಹಾಕುವ ಮೂಲಕ ಆತ್ಮೀಯವಾಗಿ ಅಭಿನಂದಿಸಿ ಶುಭಾಶಯ ಕೋರಿದರು.**



ಈ ಸಂದರ್ಭದಲ್ಲಿ ಸಚಿವರು ರಾಜ್ಯದ ಅಭಿವೃದ್ಧಿ, ಜನಸೇವೆ ಹಾಗೂ ಎಲ್ಲ ವರ್ಗದ ಜನರ ಕಲ್ಯಾಣಕ್ಕಾಗಿ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದರು. ಜನಾಬ್ ಸಯ್ಯದ್ ಶಕೀಲ್ ಅಹ್ಮದ್ ಖಾಜಿ ಅವರು ಸಚಿವರ ಅವಧಿಯಲ್ಲಿ ರಾಜ್ಯ ಹಾಗೂ ವಿಶೇಷವಾಗಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವಂತೆ ಹಾರೈಸಿದರು. ಈ ಭೇಟಿ ವೇಳೆ ಜೈನುಲ್ ನಗಾರ್ಚಿ ಹಲವು ಗಣ್ಯರು ಹಾಗೂ ಮುಖಂಡರು ಉಪಸ್ಥಿತರಿದ್ದು, ನೂತನ ಸಚಿವರಿಗೆ ಶುಭಾಶಯಗಳನ್ನು ಸಲ್ಲಿಸಿದರು.

## ತುಂಗಭದ್ರಾ ಎಡದಂಡೆ ಕಾಲುವೆಯಲ್ಲಿ ಬಿರುಕು: ತಕ್ಷಣ ದುರಸ್ತಿಗೆ ರೈತರ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಮೈಲಾಪುರ: ತುಂಗಭದ್ರಾ ಎಡದಂಡೆ ಕಾಲುವೆಯ ಮೈಲಾಪುರ ಸಮೀಪದ 46ನೇ ಚೈನ್‌ನಲ್ಲಿ ಕಾಲುವೆಯ ಒಂದು ಭಾಗ ಬಿರುಕು ಬಿಟ್ಟು ಕುಸಿತ ಉಂಟಾಗಿರುವುದು ಸ್ಥಳೀಯ ರೈತರಲ್ಲಿ ಆತಂಕ ಮೂಡಿಸಿದೆ.**

ಕಾಲುವೆಗೆ ನೀರು ಹರಿಸಿದಲ್ಲಿ ಬಿರುಕು ಮತ್ತಷ್ಟು ವಿಸ್ತರಿಸಿ, ಕಾಲುವೆ ಒಡೆಯುವ ಸಾಧ್ಯತೆ ಹೆಚ್ಚಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಸ್ಥಳ ಪರಿಶೀಲನೆ ನಡೆಸಿ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಬೇಕು ಎಂದು ರೈತರು ಒತ್ತಾಯಿಸಿದ್ದಾರೆ. ಕಾಲುವೆಯ ಬಿರುಕು ಬಿಟ್ಟಿರುವ ಭಾಗವನ್ನು ಕೂಡಲೇ ದುರಸ್ತಿಗೊಳಿಸದಿದ್ದರೆ, ನೀರು ಹರಿಸುವ ಸಂದರ್ಭದಲ್ಲಿ ಕಾಲುವೆ ಒಡೆದು ಸುತ್ತಮುತ್ತಲಿನ ಕೃಷಿ ಜಮೀನುಗಳಿಗೆ ಹಾನಿಯಾಗುವ ಸಾಧ್ಯತೆ ಇದೆ. ಇದರಿಂದ ರೈತರ ಬೆಳೆಗಳಿಗೆ ತೊಂದರೆಯಾಗುವುದರ ಜೊತೆಗೆ, ಕಾಲುವೆ ನೀರಿನ ಸರಬರಾಜಿಗೂ ವ್ಯತ್ಯಯ ಉಂಟಾಗಬಹುದು ಎಂದು ರೈತರು ಆತಂಕ ವ್ಯಕ್ತಪಡಿಸಿದರು.



ವಿಷಯ ತಿಳಿದ ಮಾಜಿ ಸಂಸದ ಕೆ. ವಿರುಪಾಕ್ಷಪ್ಪ ಅವರು ಸ್ಥಳಕ್ಕೆ ಭೇಟಿ ನೀಡಿ, ಬಿರುಕು ಬಿಟ್ಟಿರುವ ಕಾಲುವೆಯ ಭಾಗವನ್ನು ಪರಿಶೀಲಿಸಿದರು.

ನಂತರ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಮಾತನಾಡಿ, ಕಾಲುವೆಯ ಸ್ಥಿತಿಗತಿಯನ್ನು ವಿವರಿಸಿ, ರೈತರ ಹಿತದೃಷ್ಟಿಯಿಂದ ತುರ್ತು ಕ್ರಮ ಕೈಗೊಂಡು ಅಗತ್ಯ ದುರಸ್ತಿ ಕಾರ್ಯವನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಸದಸ್ಯ ತಿರುಪತಿ ಗುಡುತಳ, ದೇವೇಂದ್ರಪ್ಪ ತಳವಾರ, ಹನುಮಂತಪ್ಪ, ಶರಣಪ್ಪ ದಾಸನಾಳ, ನಿಂಗನಗೌಡ, ದುರ್ಗನಗೌಡ ಸೇರಿದಂತೆ ದುರ್ಗಾ ಕ್ಯಾಂಪ್, ಕೆ. ಬಸಾಪುರ, ತುರವಿಹಾಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಅನೇಕ ರೈತರು ಉಪಸ್ಥಿತರಿದ್ದರು. ಕಾಲುವೆಗೆ ನೀರು ಹರಿಸುವ ಮುನ್ನವೇ ಬಿರುಕು ಬಿಟ್ಟಿರುವ ಭಾಗವನ್ನು ತಾಂತ್ರಿಕವಾಗಿ ಪರಿಶೀಲಿಸಿ, ಅಗತ್ಯ ಬಲವರ್ಧನೆ ಮತ್ತು ದುರಸ್ತಿ ಕಾರ್ಯ ಕೈಗೊಳ್ಳಬೇಕು. ಕಾಲುವೆ ಒಡೆಯುವ ಅಪಾಯವನ್ನು ತಪ್ಪಿಸಿ, ನೀರಾವರಿ ನೀರು ನಿರಂತರವಾಗಿ ರೈತರ ಜಮೀನುಗಳಿಗೆ ತಲುಪುವಂತೆ ಕ್ರಮ ಕೈಗೊಳ್ಳಬೇಕು ಎಂದು ರೈತರು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರು.

## ಗೋಮರ್ಸಿ ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ಕುರಿತು ಅಬಕಾರಿ ಇಲಾಖೆಯ ಅಧಿಕಾರಿಗಳ ಪರಿಶೀಲನೆ: ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರು ತಾಲೂಕಿನ ಗೋಮರ್ಸಿ ಗ್ರಾಮದಲ್ಲಿ ನಡೆಯುತ್ತಿದೆ ಎಂದು ಸಾರ್ವಜನಿಕರಿಂದ ದೂರುಗಳು ಬಂದಿದ್ದ ಅಕ್ರಮ ಮದ್ಯ ಮಾರಾಟದ ಕುರಿತು ಅಬಕಾರಿ ಇಲಾಖೆಯ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ.**


ಗ್ರಾಮದ ವಿವಿಧ ಪ್ರದೇಶಗಳಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸಿ, ಸ್ಥಳೀಯರಿಂದ ಮಾಹಿತಿ ಸಂಗ್ರಹಿಸಿದ್ದಾರೆ. ಅಕ್ರಮ ಮದ್ಯ ಮಾರಾಟಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿದ ನಿರುಪಾದಿ ಕೆ ಗೋಮರ್ಸಿ ಗ್ರಾಮದಲ್ಲಿ



ಅಕ್ರಮ ಮದ್ಯ ಮಾರಾಟದಿಂದ ಯುವಜನತೆ,ಮಹಿಳೆಯರು ಹಾಗೂ ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ಜೀವನದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ,ಈ ಅಕ್ರಮವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಅತ್ಯಗತ್ಯವಾಗಿದೆ.ಆದ್ದರಿಂದ ಅಬಕಾರಿ ಇಲಾಖೆ ನಿರಂತರ ದಾಳಿ ನಡೆಸಿ,ಅಕ್ರಮ ಮದ್ಯ ಮಾರಾಟದಲ್ಲಿ ತೊಡಗಿರುವವರ ವಿರುದ್ಧ ಯಾವುದೇ ಒತ್ತಡಕ್ಕೆ ಮಣಿಯದೆ ಕಠಿಣ ಕಾನೂನು ಕ್ರಮ ಜರುಗಿಸಬೇಕು.

ಅಧಿಕಾರಿಗಳ ಈ ಪರಿಶೀಲನೆ ಕೇವಲ ಔಪಚಾರಿಕತೆಯಾಗದೆ, ಶಾಶ್ವತ ಪರಿಹಾರಕ್ಕೆ ದಾರಿ ಮಾಡಿಕೊಡಬೇಕು.



ಕರ್ನಾಟಕ ಸರ್ಕಾರ
ಅಬಕಾರಿ ನಿರೀಕ್ಷಕರ ಕಾರ್ಯಾಲಯ, ಸಿಂಧನೂರು ವಲಯ ರಾಯಚೂರು
ಐ.ಬಿ ಹಿಂದುಗಡೆ, ಪ್ರಶಾಂತ ನಗರ, ಸಿಂಧನೂರು
ಫೋನ್: 08535–223020 ಇ-ಮೇಲ್: exesnd@gmail.com
ಇಎಕ್ಸ್‌ಇ/ಎಸ್‌ಎನ್‌ಡಿ/ದೂರು/22/2026–27 ದಿನಾಂಕ: 03/08/2026

:: ಹಿಂಬರಹ ::

ವಿಷಯ:– ಗೋಮರ್ಸಿ ಗ್ರಾಮದಲ್ಲಿ ನಡೆಯುತ್ತಿರುವ ಅಕ್ರಮ ಮದ್ಯ ಮಾರಾಟವನ್ನು ತಕ್ಷಣ ತಡೆಗಟ್ಟುವಂತೆ ಬಂದ ದೂರಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವ ಕುರಿತು.
ಉಲ್ಲೇಖ:– ತಮ್ಮ ವಾಟ್ಸಪ್ ದೂರು ದಿನಾಂಕ: 02/08/2026

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮಗೆ ಹಿಂಬರಹ ನೀಡುವುದೇನೆಂದರೆ, ಉಲ್ಲೇಖಿತ ವಾಟ್ಸಪ್ ದೂರಿನಲ್ಲಿ ಗೋಮರ್ಸಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು ಅಂತವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ದೂರು ಅರ್ಜಿ ಸಲ್ಲಿಸಿರುವುದು ಇರುತ್ತದೆ.

ಅದರಂತೆ, ಸದರಿ ದೂರು ಅರ್ಜಿಯನ್ನು ಪರಿಶೀಲಿಸಲಾಗಿ ದಿನಾಂಕ: 03/08/2026 ರಂದು ಸಿಂಧನೂರು ವಲಯದ ಅಬಕಾರಿ ನಿರೀಕ್ಷಕರು ಹಾಗೂ ವಲಯ ಸಿಬ್ಬಂದಿಯೊಂದಿಗೆ ಸಿಂಧನೂರು ತಾಲೂಕಿನ ಗೋಮರ್ಸಿ ಗ್ರಾಮದಲ್ಲಿ ಅಬಕಾರಿ ದಾಳಿ ಮಾಡಿ ಡಬ್ಬ ಅಂಗಡಿ/ಕಿರಾಣಿ ಅಂಗಡಿ/ಹೋಟಲ್ ಹಾಗೂ ಅನುಮಾನಸ್ಪದ ಸ್ಥಳಗಳನ್ನು ತಪಾಸಣೆ ಮಾಡಲಾಗಿರುತ್ತದೆ. ಸದರಿ ಗ್ರಾಮದಲ್ಲಿ ಬಸವರಾಜ ತಂದೆ ಸಿದ್ದಪ್ಪ ಎಂಬುವವರು ಅಬಕಾರಿ ಕಾಯ್ದೆ ಉಲ್ಲಂಘನೆ ಮಾಡಿರುವುದು ಕಂಡುಬಂದಿರುವುದರಿಂದ ಸದರಿಯವರ ವಿರುದ್ಧ ಅಬಕಾರಿ ನಿರೀಕ್ಷಕರು ಸಿಂಧನೂರು ವಲಯ ರವರು ಪ್ರಕರಣ ಸಂಖ್ಯೆ 008/2026-27/073461194IE/2449657 ಅನ್ನು ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಿರುತ್ತದೆ. ಮುಂದಿನ ದಿನಗಳಲ್ಲಿಯು ಸಹ ನಿರಂತರ ಗಸ್ತುಕಾರ್ಯ ನಿರ್ವಹಿಸಿ ಅಬಕಾರಿ ಅಕ್ರಮಗಳು ನಡೆಯದಂತೆ ನಿಗಾ ವಹಿಸಲಾಗುವುದು. ಹಾಗೂ ಅಬಕಾರಿ ಅಕ್ರಮಗಳು ಕಂಡುಬಂದರೆ ಸೂಕ್ತ ಕ್ರಮವಹಿಸಲಾಗುವುದೆಂದು ಸದರಿ ಹಿಂಬರಹವನ್ನು ನೀಡಿದೆ.

ಅಬಕಾರಿ ನಿರೀಕ್ಷಕರು
ಸಿಂಧನೂರು ವಲಯ

ಗೆ,
ನಿರುಪಾದಿ ಕೆ ಗೋಮರ್ಸಿ

ಗ್ರಾಮದಲ್ಲಿ ಮತ್ತೆ ಅಕ್ರಮ ಮದ್ಯ ಮಾರಾಟ ನಡೆಯದಂತೆ ಕಟ್ಟುನಿಟ್ಟಿನ ನಿಗಾವಹಿಸಿ, ಸಾರ್ವಜನಿಕರಿಗೆ ಸುರಕ್ಷಿತ ಮತ್ತು ಆರೋಗ್ಯಕರ ವಾತಾವರಣ ಕಲ್ಪಿಸಬೇಕು ಎಂದು ಆಗ್ರಹಿಸುತ್ತೇನೆ. ಸಾರ್ವಜನಿಕರು ಸಹ ಅಕ್ರಮ ಚಟುವಟಿಕೆಗಳ ಬಗ್ಗೆ ಸಂಬಂಧಿಸಿದ ಇಲಾಖೆಗೆ ಮಾಹಿತಿ ನೀಡಿ, ಕಾನೂನು ಪಾಲನೆಗೆ ಸಹಕರಿಸುವಂತೆ ವಿನಂತಿಸುತ್ತೇನೆ ಎಂದು ತಿಳಿಸಿದರು.

## ಗ್ರಾಪಂ ಕಟ್ಟಡ ನೊಡಕ್ಕೆ ದೊಡ್ಡದು,ಪಿಡಿಒ,ಡಿಇಒ ಹುದ್ದೆ ಖಾಲಿ,ಮೇಲಾದಿಕಾರಿಗಳ ನಿರ್ಲಕ್ಷ್ಯ, ಜನರು ಆಕ್ರೋಶ

❑ ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಮಸ್ಕಿ ತಾಲೂಕಿನಲ್ಲಿ ಹಾಲಾಪೂರ ಗ್ರಾಪಂ ಪಂಚಾಯತಿ ದೊಡ್ಡದು, ಇಲ್ಲಿ 26 ಸದಸ್ಯ ರನ್ನು ಒಳಗೊಂಡಿದೆ, 11 ಹಳ್ಳಿ ಮೂರು ಕ್ಯಾಂಪ ಬರುತ್ತವೆ, ಇಲ್ಲಿ ಪಿಡಿಒ ಹುದ್ದೆ ಖಾಲಿಯಾಗಿ ತಿಂಗಳೆಗಳೆ ಕಳೆದಿದೆ,ಡಿಇಒ,ಬಿಲ್ ಕಲೆಕ್ಟರ್, ನಾಲ್ಕು ಹಳ್ಳಿಗಳಿಗೆ ವಾಟರ್ ಮ್ಯಾನ ಇಲ್ಲ, ಇಲ್ಲಿನ ಸಾರ್ವಜನಿಕರು ಸುತ್ತ ಆರೇಳು ಕಿಮೀ ದೂರದಿಂದ ಕೆಲಸಕ್ಕೆ ಬಂದರೆ ಇಲ್ಲಿ ಅಧಿಕಾರಿಗಳೆ ಇಲ್ಲ,**

ಹೀಗಾದರೆ ಜನರ ಅಹವಾಲು ಯಾರಿಗೆ ಹೇಳಬೇಕು ಎಂಬ ದೊಡ್ಡ ಸಮಸ್ಯೆ ಎದುರಾಗಿದೆ,ಗ್ರೇಡ್ ಒನ್ ಸೆಕ್ರೆಟರಿ ರಮೇಶ ರವರು ಕಾರ್ಯನಿರ್ವಸುತ್ತಿದ್ದು ಸಣ್ಣಪುಟ್ಟ ಕೆಲಸ ಮಾತ್ರ ನಡೆಯುತ್ತವೆ, ಅವರಿಗೆ ಪೂರ್ಣಪ್ರಮಾಣದಲ್ಲಿ ಅಧಿಕಾರ ಇಲ್ಲ, ಹಳ್ಳಿಗಳಲ್ಲಿ ನೀರಿನ ಸಮಸ್ಯೆ,ಚರಂಡಿ, ಪ್ರಸ್ತುತ ಬೀಕರ ಬರಗಾಲ ಜನರಿಗೆ ಉದ್ಯೋಗ ಖಾತ್ರಿ ಕೆಲಸ ಇಲ್ಲ,ಜನರು




**ನೂತನ ಪಿಡಿಒ ಇಂದು ಅಥವಾ ನಾಳೆ ಬರುತ್ತಾರೆ, ಸಾರ್ವಜನಿಕರ ಕೆಲಸಗಳು ಸುಗಮವಾಗಿ ನಡೆಯುತ್ತವೆ"....... ಶಿವಾನಂದರಡ್ಡಿ ತಾಪಂ ಪ್ರಭಾರಿ ಇಒ**

**"ಬೀಕರ ಬರಗಾಲ, ಜನರಿಗೆ ಉದ್ಯೋಗ ಖಾತ್ರಿ ಕೆಲಸ ಇಲ್ಲ, ಅಧಿಕಾರ ಕುಂಠಿತ, ಜನಸಾಮಾನ್ಯರ ಕೆಲಸ ನೆನಗುದಿಗೆ" .... ಚಂದಪ್ಪ ದೊಡ್ಡಮನಿ ಗ್ರಾಮಸ್ಥ**

ಬೇಸತ್ತು ನಗರ ಪ್ರದೇಶಗಳಿಗೆ ಗೂಳೆ ಹೊಂಟಿದ್ದಾರೆ ಇನ್ನಾದರೂ ಕೆಲಸ ಇಲ್ಲ ಹಾಗೆ ವಾಟರ್ ಮ್ಯಾನಗಳಿಗೆ ವೇತನ ಇಲ್ಲ ಅವರು ಗೋಳಾಟ ಯಾರು ಕೇಳುವವರು ಇಲ್ಲ.ಒಟ್ಟಾರೆ ಹಾಲಾಪೂರ ಗ್ರಾಪಂ ಆಡಳಿತ ಯಂತ್ರ ಮೇಲಾದಿಕಾರಿಗಳ ನಿರ್ಲಕ್ಷ್ಯ ದಿಂದ ತೀವ್ರವಾಗಿ ಕುಂಠಿತಗೊಂಡಿದೆ ಇದಕ್ಕೆ ಶಾಶ್ವತ ಪರಿಹಾರ ಯಾವಗ ಎಂಬುದೆ ಸಾರ್ವಜನಿಕರಿಗೆ ಯಜ್ಞ ಪ್ರಶ್ನೆಯಾಗಿದೆ.

## AO ಮತ್ತು AAO ನೇಮಕಾತಿಯಲ್ಲಿ ಅರ್ಹತಾ ಮಾನದಂಡಗಳ ಬದಲಾವಣೆ ವಿರೋಧಿಸಿ ಸರ್ಕಾರಿ ಕೃಷಿ ವಿವಿ ವಿದ್ಯಾರ್ಥಿಗಳಿಂದ ಬೃಹತ್ ಧರಣಿ

❑ ನೈಜ್ಯ ದೆಸೆ ನ್ಯೂಸ್

**ಭೀಮರಾಯನಗುಡಿ: ನಾಡಿನ ಅನ್ನದಾತರ ಶ್ರೇಯೋಭಿವೃದ್ಧಿ ಹಾಗೂ ಕೃಷಿ ಕ್ಷೇತ್ರದ ಉಳಿವಿಗಾಗಿ ಹಗಲಿರುಳು ಶ್ರಮಿಸುತ್ತಿರುವ ರಾಜ್ಯದ ಸರ್ಕಾರಿ ಕೃಷಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು, ಕೃಷಿ ಇಲಾಖೆಯ ಕೆಲವು ರೈತ ಹಾಗೂ ವಿದ್ಯಾರ್ಥಿ ವಿರೋಧಿ ನೀತಿಗಳನ್ನು ಖಂಡಿಸಿ ಭೀಮರಾಯನ ಗುಡಿಯಲ್ಲಿ ಅನಿರ್ದಿಷ್ಟಾವಧಿ ಬೃಹತ್ ಧರಣಿ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ.**

ಕೃಷಿ ಅಧಿಕಾರಿ (AO) ಹಾಗೂ ಸಹಾಯಕ ಕೃಷಿ ಅಧಿಕಾರಿ (AAO) ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಕೊನೆಯ ಕ್ಷಣದಲ್ಲಿ ಮಾಡಲಾಗಿರುವ ಏಕಪಕ್ಷೀಯ ಬದಲಾವಣೆಗಳು ಸಾವಿರಾರು ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿವೆ ಎಂದು ಪ್ರತಿಭಟನಾಕಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.




ಮುಂಬರುವ ಕೆಇಎ (KEA) ಪರೀಕ್ಷೆಗೆ ಆರಂಭದಲ್ಲಿ ನಿಗದಿಪಡಿಸಿದ್ದ ನಿಯಮಗಳನ್ನು ಗಾಳಿಗೆ ತೂರಿ, ಐಸಿಎಆರ್ (ICAR) ಮಾನ್ಯತೆ ಇಲ್ಲದ ಖಾಸಗಿ ರೈಟೆಕ್ (Rai Technology) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೂ ಸಹ ನೇಮಕಾತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಂವಿಧಾನದ 309ನೇ ವಿಧಿಯಡಿ




ರೂಪಿಸಲಾದ ವೃಂದ ಮತ್ತು ನೇಮಕಾತಿ (C&R) ನಿಯಮಗಳಿಗೆ ಇದು ನೇರ ವಿರೋಧವಾಗಿದೆ. ಅಲ್ಲದೆ, ನೇಮಕಾತಿ ಪ್ರಕ್ರಿಯೆ ಆರಂಭವಾದ ನಂತರ ಅರ್ಹತಾ ಮಾನದಂಡಗಳನ್ನು ಬದಲಾಯಿಸುವಂತಿಲ್ಲ ಎಂದು 2025ರ ಏಪ್ರಿಲ್ 10ರಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ವಿದ್ಯಾರ್ಥಿಗಳು ಆಪಾದಿಸಿದ್ದಾರೆ. ಕೃಷಿ ಶಿಕ್ಷಣದಲ್ಲಿ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳಲು ಭಾರತೀಯ ಕೃಷಿ ಅನುಶೋಧನಾ ಪರಿಷತ್ತು (ICAR) ಮಾನ್ಯತೆ ಅತ್ಯಂತ ಕಡ್ಡಾಯವಾಗಿದೆ. ಮಾನ್ಯತೆ ಇಲ್ಲದ ಶಿಕ್ಷಣ ಸಂಸ್ಥೆಗಳ ಪದವೀಧರರನ್ನು ನೇಮಕಾತಿ ಪ್ರಕ್ರಿಯೆಯಲ್ಲಿ ಪರಿಗಣಿಸುವುದು ಅಧಿಕೃತ ಕೃಷಿ ಶಿಕ್ಷಣದ ಮೌಲ್ಯವನ್ನು ಕುಗ್ಗಿಸುತ್ತದೆ.

ರಾಜ್ಯದ ರಾಯಚೂರು ಕೃಷಿ ವಿವಿ, ಧಾರವಾಡ ಕೃಷಿ ವಿವಿ, ಬೆಂಗಳೂರು ಕೃಷಿ ವಿವಿ ಹಾಗೂ ಶಿವಮೊಗ್ಗ ಕೃಷಿ ವಿವಿಯಲ್ಲಿ ಕಷ್ಟಪಟ್ಟು, ಕಠಿಣ ಪ್ರವೇಶ ಪರೀಕ್ಷೆಗಳ ಮೂಲಕ ವ್ಯಾಸಂಗ ಮಾಡಿ ಬರುವ ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಈ ನಡೆ ದೊಡ್ಡ ಅನ್ಯಾಯ ಮಾಡಿದೆ.ಅರ್ಹತೆ ಮತ್ತು ಗುಣಮಟ್ಟದ ಮಾನದಂಡಗಳನ್ನು ಕಡೆಗಣಿಸಿ ನೇಮಕ ಮಾಡಿಕೊಳ್ಳುವುದರಿಂದ ಭವಿಷ್ಯದಲ್ಲಿ ಕೃಷಿ ಇಲಾಖೆಯ ಆಡಳಿತ ಹಾಗೂ ರೈತರಿಗೆ ಸಿಗಬೇಕಾದ ವೈಜ್ಞಾನಿಕ ತಾಂತ್ರಿಕ ಸಲಹೆಗಳ ಗುಣಮಟ್ಟ ಕುಸಿಯುವ ಗಂಭೀರ ಆತಂಕವಿದೆ. ಎಒ ಮತ್ತು ಎಎಒ ನೇಮಕಾತಿ ಪ್ರಕ್ರಿಯೆಯಿಂದ ರೈಟೆಕ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ನೀಡಿರುವ ಅನರ್ಹ ಅವಕಾಶವನ್ನು ತಕ್ಷಣವೇ ರದ್ದುಪಡಿಸಬೇಕು. ಮೂಲ C&R (Cadre & Recruitment) ನಿಯಮಗಳ ಪ್ರಕಾರವೇ ಸಂಪೂರ್ಣ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಬೇಕು. ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಯು ಈ ಕೂಡಲೇ ಎಚ್ಚೆತ್ತುಕೊಂಡು ಸೂಕ್ತ ತಿದ್ದುಪಡಿ ಆದೇಶ ಹೊರಡಿಸಬೇಕು. ಒಂದು ವೇಳೆ ಕೂಡಲೇ ಸಕಾರಾತ್ಮಕ ನಿರ್ಧಾರ ಕೈಗೊಳ್ಳದಿದ್ದರೆ, ರಾಜ್ಯಾದ್ಯಂತ ಕೃಷಿ ವಿದ್ಯಾರ್ಥಿಗಳ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಹಾಗೂ ಉಗ್ರ ಸ್ವರೂಪದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ವಿದ್ಯಾರ್ಥಿ ಮುಖಂಡರು ಎಚ್ಚರಿಕೆ ನೀಡಿದ್ದಾರೆ.

## ಸಾಹಿತ್ಯ ಸಿಂಚನ

### ಮಾನವೀಯತೆಯ ಹಾದಿ

ಮಾನವೀಯತೆಯ ಹಾದಿಯಲಿ ನಡೆವವನೇ
ಶ್ರೇಷ್ಠನು, ಪ್ರೀತಿ ಕರುಣೆಯ ಬೆಳಕೇ ಅವನ ನಿಜ
ಸಂಪತ್ತು.

ನೊಂದವರ ಕಣ್ಣೀರೊರೆಸುವ ಕೈಗಳೇ ಪೂಜ್ಯವು,
ಸಹಾಯದ ಹೃದಯವೇ ಬದುಕಿನ
ಸೌಂದರ್ಯವು.

ಸ್ವಾರ್ಥವ ಬದಿಗಿಟ್ಟು ಸೇವೆಯ ದಾರಿಯಲಿ,
ಸಮಾಜದ ಹಿತವೇ ಅರಳಲಿ ಮನದೊಳಲಿ.

ಮಧುರ ಮಾತು ಮನದ ಗಾಯವ
ಗುಣಪಡಿಸಲಿ,
ಒಳ್ಳೆಯ ನಡೆ ಜಗದ ಬೆಳಕಾಗಲಿ.

ಜಾತಿ?ಧರ್ಮದ ಗೋಡೆಗಳು ಕರಗಿಹೋಗಲಿ,
ಮಾನವೀಯತೆಯ ಸೇತುವೆ ಎಲ್ಲರನ್ನೂ ಸೇ-
ರಿಸಲಿ.

ಕ್ಷಮೆಯ ಗುಣವೇ ಜೀವನದ ಆಭರಣ,
ಸತ್ಯದ ದಾರಿಯೇ ಯಶಸ್ಸಿನ ಕಾರಣ.

ಪ್ರೀತಿಯ ಬೀಜವ ಬಿತ್ತಿದರೆ ಶಾಂತಿ ಅರಳುವುದು,
ದಯೆಯ ದೀಪ ಹಚ್ಚಿದರೆ ಕತ್ತಲೆ
ದೂರಾಗುವುದು.

ಒಬ್ಬರ ನೋವಿಗೆ ಮತ್ತೊಬ್ಬರು ಸ್ಪಂದಿಸಿದಾಗ,
ಜೀವನದ ಅರ್ಥವೇ ಹೊಸದಾಗಿ ಮೂಡುವುದು.

ಮಾನವೀಯತೆಯ ಹಾದಿಯೇ ನಿಜವಾದ
ಧರ್ಮ, ಅದೇ ಮನುಕುಲದ ಶಾಶ್ವತ ಕರ್ಮ.

ಪ್ರೀತಿ, ದಯೆ, ಸಹಾನುಭೂತಿ ಜೊತೆಯಾದರೆ,
ಭೂಮಿಯೇ ಸ್ವರ್ಗವಾಗಿ ಅರಳುವುದು
ಖಂಡಿತವೇ.

## ಎಡದಂಡೆ ಕಾಲುವೆಗೆ ತಕ್ಷಣ ನೀರು ಹರಿಸಿ: ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಆಗ್ರಹ

❏ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಎಡದಂಡೆ ಕಾಲುವೆಗೆ ನೀರು ಹರಿಸಲು ಸರ್ಕಾರ ಕೂಡಲೇ ಐಸಿಸಿ (ICC) ಸಭೆ ಕರೆದು ಭತ್ತದ ಬೆಳೆಗೆ ನೀರು ಒದಗಿಸಬೇಕು. ಇಲ್ಲದಿದ್ದರೆ ರೈತರೊಂದಿಗೆ ಸೇರಿ ಜೆಡಿಎಸ್ ಪಕ್ಷದ ವತಿಯಿಂದ ರಸ್ತೆಗಿಳಿದು ಉಗ್ರ ಹೋರಾಟ ನಡೆಸಲಾಗುವುದು ಎಂದು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಎಚ್ಚರಿಕೆ ನೀಡಿದರು.**

ಪಟ್ಟಣದ ಜೆಡಿಎಸ್ ಪಕ್ಷದ ಕಾರ್ಯಾಲಯದಲ್ಲಿ ಮಂಗಳವಾರ ಮಾನ್ವಿ ಹಾಗೂ ಸಿರವಾರ ತಾಲೂಕು ಜೆಡಿಎಸ್ ಪಕ್ಷದ ವತಿಯಿಂದ ಆಯೋಜಿಸಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕಳೆದ ಬೇಸಿಗೆ ಹಂಗಾಮಿನಲ್ಲಿ ಗೇಟ್ ದುರಸ್ತಿಯ ನೆಪವೊಡ್ಡಿ, ಡ್ಯಾಂನಲ್ಲಿ ಸಾಕಷ್ಟು



ನೀರಿನ ಸಂಗ್ರಹವಿದ್ದರೂ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ರೈತರಿಗೆ ನೀರು ಒದಗಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು. ಇದ-ರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಭತ್ತದ ಬೆಳೆಗೂ ಹಾನಿಯಾಗಿದೆ ಎಂದು ಹೇಳಿದರು.

ಪ್ರಸ್ತುತ ಜಲಾಶಯದಲ್ಲಿ ಸುಮಾರು 51 ಟಿಎಂಸಿ ನೀರಿನ ಸಂಗ್ರಹವಿದ್ದು, 91 ಸಾವಿರ ಕ್ಯೂಸೆಕ್ಸ್ ಒಳಹರಿವು (Inflow) ಬರುತ್ತಿದೆ. ಮೇಲ್ಭಾಗದಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಇನ್ನೂ ನಾಲ್ಕೈದು ದಿನಗಳಲ್ಲಿ ಅಥವಾ ವಾರದೊಳಗೆ ನೀರಿನ ಸಂಗ್ರಹ 70 ಟಿಎಂಸಿ ದಾಟುವ ಸಾಧ್ಯತೆಯಿದೆ. ಆದ-ರಿಂದ ಸರ್ಕಾರ ಯಾವುದೇ ವಿಳಂಬ ಮಾಡದೆ ಐಸಿಸಿ ಸಭೆ ನಡೆಸಿ ಎಡದಂಡೆ ಕಾಲುವೆಗೆ ನೀರು ಹರಿಸುವ ಮೂಲಕ ಮಾನ್ವಿ ಹಾಗೂ ಸಿರವಾರ ಭಾಗದ ರೈತರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದರು.

ಮಾನ್ವಿ ಮತ್ತು ಸಿರವಾರ ಭಾಗದ ರೈತರು ಈಗಾಗಲೇ ಭತ್ತ ಬಿತ್ತನೆ ಮಾಡಿದ್ದು, ಕೂಡಲೇ ನೀರು ಹರಿಸಿದರೆ ಬೆಳೆ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಸರ್ಕಾರ ನಿರ್ಲಕ್ಷ್ಯ ಮುಂದುವರಿಸಿದರೆ ರೈತರೊಂದಿಗೆ ಸೇರಿ ಜೆಡಿ-ಎಸ್ ಪಕ್ಷದ ವತಿಯಿಂದ ರಸ್ತೆಗಿಳಿದು ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮಾನ್ವಿ ತಾಲೂಕು ಅಧ್ಯಕ್ಷ ಈರಣ್ಣ ಮರ್ಲಟ್ಟಿ, ಸಿರವಾರ ತಾಲೂಕು ಅಧ್ಯಕ್ಷ ಟಿ. ಮಲ್ಲಿಕಾರ್ಜುನ ಬಲ್ಲಟಗಿ, ರೈತ ಘಟಕದ ಅಧ್ಯಕ್ಷ ಶರಣಪ್ಪಗೌಡ ಮದ್ಲಾಪುರ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಭರತನಾಟ್ಯ ಪ್ರವೀಣೆ ಅಂಜಲಿಗೆ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದಲ್ಲಿ ಸೋಮವಾರ ಜರುಗಿದ ತಾಳಿಕೋಟಿ ಸಹಕಾರಿ ಬ್ಯಾಂಕ್ ನ ವಾರ್ಷಿಕ ಮಹಾಸಭೆಯಲ್ಲಿ ಅದ್ಭುತವಾದ ಭರತನಾಟ್ಯ ಪ್ರದರ್ಶನವನ್ನು ನೀಡಿ ಎಲ್ಲರ ಮೆಚ್ಚುಗೆಗೆ ಪಾತ್ರಳಾದ ಬಾಲಕಿ ಅಂಜಲಿ ವಿಜಯಸಿಂಗ್ ಹಜೇರಿ ಇವಳನ್ನು ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಿ ಸತ್ಕರಿಸಲಾಯಿತು.**

ಬಾಲ್ಯದಿಂದಲೇ ಭರತನಾಟ್ಯ ತರಬೇತಿಯನ್ನು ಪಡೆಯುತ್ತಿರುವ ಬಾಲಕಿ ಅಂಜಲಿ ಹಜೇರಿ ಅತಿ ಕಿರಿಯ ವಯಸ್ಸಿನಲ್ಲಿ ದೊಡ್ಡ ವೇದಿಕೆಗಳಲ್ಲಿ ಅದ್ಭುತವಾದ ಪ್ರದರ್ಶನವನ್ನು ನೀಡುತ್ತಿದ್ದಾಳೆ. ಬಾಲಕಿಂ-ಯ ತಂದೆಯಾದ ಪುರಸಭೆ ಮಾಜಿ ಸದಸ್ಯ ವಿಜಯಸಿಂಗ್ ಹಜೇರಿ ಹಾಗೂ ಅವರ ಧರ್ಮಪತ್ನಿ ಅವರು ಮಗಳ ಈ ಆಸಕ್ತಿಗೆ ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ಭರತನಾಟ್ಯದಲ್ಲಿ ಇವಳು ತೋರುವ ನೃತ್ಯದ ಹಾವ ಭಾವಗಳು ಎಲ್ಲರನ್ನು ಬೆರಗಾಗಿಸಿ ಮಂತ್ರ ಮುಗ್ಧರನ್ನಾಗಿ ಮಾಡುತ್ತವೆ. ಭವಿಷ್ಯದಲ್ಲಿ ಈ ಬಾಲಕಿ ಒಂದು ಅಪ್ರತಿಮ ಕಲಾವಿದೆಯಾಗಿ ಬೆಳೆಯುವುದರಲ್ಲಿ ಯಾವ ಸಂದೇಶವು ಇಲ್ಲ ಎಂಬುದು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದವರೆಲ್ಲರ ಅನಿಸಿಕೆಯಾಗಿತ್ತು.

ಗುಂಡಕನಾಳದ ಪೂಜ್ಯ ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಬ್ಯಾಂಕಿನ ಚೇರ್ಮನ್ ಕಾಶಿನಾಥ್ ಸಜ್ಜನ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಪುರಸಭೆ ಮಾಜಿ ಅಧ್ಯಕ್ಷ



ದಶರತಸಿಂಗ್ ಮನಗೂಳಿ, ವಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ ಎಸ್ ಪಾಟೀಲ (ಯಾಳಗಿ), ಅಡತ್ ಅಸೋಸಿಯೇಷನ್ ಅಧ್ಯಕ್ಷ ಅಶೋಕ ಶೆಟ್ಟಿ, ಉಪಾಧ್ಯಕ್ಷ ಚಿಂತಪ್ಪಗೌಡ ಯಾಳಗಿ, ಪ್ರಧಾನ ವ್ಯವಸ್ಥಾಪಕ ಬಿ.ಕೆ.ಮಣ್ಣೂರ, ಆಡಳಿತ ಮಂಡಳಿ ನಿರ್ದೇಶಕರು, ನಾಮ ನಿರ್ದೇಶಿತ ಸದಸ್ಯರು, ಬ್ಯಾಂಕಿನ ಶೇರುದಾರರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಮೂರು ಜನ ಶಾಸಕರಿದ್ದರೂ ಯಾದಗಿರಿ ಜಿಲ್ಲೆಗೆ ಇಲ್ಲ ಮಂತ್ರಿ ಭಾಗ್ಯ

❏ ನೈಜ್ಯ ದೆಸೆ ನ್ಯೂಸ್

**ಯಾದಗಿರಿ: ಜಿಲ್ಲೆಯಲ್ಲಿ ಮೂರು ಜನ ಕಾಂಗ್ರೆಸ್ ಶಾಸಕರಿದ್ದರು ಕೂಡ ಜಿಲ್ಲೆಗೆ ಮಂತ್ರಿ ಭಾಗ್ಯ ಕೊಟ್ಟಿಲ್ಲ ಎಂದು ಕಾಂಗ್ರೆಸ್ ಪಕ್ಷದ ಯುವ ಮುಖಂಡರಾದ. ಭೀಮರೆಡ್ಡಿ ಚೆಕಿನಾಳ. ಮುದನೂರ್. ಇವರು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.**



ಮೊದಲೇ ಕಲ್ಯಾಣ ಕರ್ನಾಟಕ ಭಾಗದಲ್ಲಿ ಯಾದಗಿರಿ ಜಿಲ್ಲೆ, ಬಹಳ ಹಿಂದುಳಿದಿದೆ. ಈ ಜಿಲ್ಲೆಯ ಅಭಿವೃದ್ಧಿಯಾಗಬೇಕಾದರೆ. ಜಿಲ್ಲೆಯವ-ರಿಗೆ ಮಂತ್ರಿ ಭಾಗ್ಯವನ್ನು ಕೊಟ್ಟರೆ ಅಭಿವೃದ್ಧಿ ಮಾಡಲು ಸಹಕಾರಿಯಾಗುತ್ತಿತ್ತು. ಆದ-ರೆ ಜಿಲ್ಲೆಗೆ ಮಂತ್ರಿ ಭಾಗ್ಯ ಕೊಟ್ಟಿಲ್ಲ ಹಿಂದುಳಿದ ಜಿಲ್ಲೆಯೇ. ಇಂದು ಉಳಿಯುವ ಹಾಗೆ ಮಾಡಿದ್ದಾರೆ ಆಕ್ರೋಶ ವ್ಯಕ್ತಪಡಿಸಿದರು. ಮೊದಲ ಸಿದ್ದರಾಮಯ್ಯ ಅವರ ಸಂಪುಟ ಸಚಿವದಲ್ಲಿ ಶಹಾಪುರ ಮತಕ್ಷೇತ್ರದ ಶಾಸಕರಾಗಿರತಕ್ಕಂತ ಶರಣಬಸಪ್ಪಗೌಡ ದರ್ಶನಾಪುರ ಅವರಿಗೆ ಕೊಟ್ಟು ಜಿಲ್ಲೆಗೆ ಅಭಿವೃದ್ಧಿಯಾಗಲು ಸಹಕಾರಿಯ ಯಾಗಿತ್ತು. ಅದೇ ರೀತಿ ಇನ್ನುಳಿದ ಒಂದು ಮಂತ್ರಿ ಸ್ಥಾನವನ್ನು ಜಿಲ್ಲೆಗೆ ಕೊಟ್ಟು ಸಹಕಾರಿಯಾಗಬೇಕೆಂದು ಕೇಳಿಕೊಂಡರು. ಯಾದಗಿರಿ ಜಿಲ್ಲೆ ಕಾಂಗ್ರೆಸ್ ಭದ್ರಕೋಟೆ ಜಿಲ್ಲೆಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು. ಅದೇ ರೀತಿಯಾಗಿ ಸುರಪುರ ಕ್ಷೇತ್ರದ ಶಾಸಕರಾಗಿರತಕ್ಕಂತ ಶ್ರೀ ರಾಜ ವೇಣುಗೋಪಾಲ್ ನಾಯಕರಿಗೆ. ಕ್ಯಾಬಿನೆಟ್ ದರ್ಜೆಯ ನಿಗಮ ಮಂಡಳಿ ಸ್ಥಾನವನ್ನು ಕೊಡಬೇಕೆಂದು ಸರಕಾರಕ್ಕೆ ಆಗ್ರಹಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಮಸ್ಕಿಯಲ್ಲಿ ತಹಶಿಲ್ದಾರ್ ಮಂಜುನಾಥ್ ಭೋಗಾವತಿ ನೇತೃತ್ವದಲ್ಲಿ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಎಸ್ಐಆರ್ ಸಭೆ

❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ (ಎಸ್ಐಆರ್) ಕಾರ್ಯವನ್ನು ಪಾರದರ್ಶಕ ಹಾಗೂ ದೋಷರಹಿತವಾಗಿ ನಡೆಸುವ ಉದ್ದೇಶದಿಂದ ತಹಸೀಲ್ದಾರ್ ಮಂಜುನಾಥ್ ಭೋಗಾವತಿ ಅವರ ನೇತೃತ್ವದಲ್ಲಿ ಪಟ್ಟಣದ ತಹಸಿಲ್ದಾರ್ ಕಚೇರಿಯಲ್ಲಿ ಮಂಗಳವಾರ ರಾಜ-ಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ನಡೆಯಿತು.**

ಸಭೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯಕ್ರಮದ ವೇಳಾಪಟ್ಟಿ, ಹೊಸ ಮತದಾರರ ಹೆಸರು ಸೇರ್ಪಡೆ, ಹೆಸರು ತಿದ್ದುಪಡಿ, ವಿಳಾಸ ಬದಲಾವಣೆ, ಮೃತ ಹಾಗೂ ಸ್ಥಳಾಂತರಗೊಂಡ ಮತದಾರರ ಹೆಸರುಗಳನ್ನು



ನಿಯಮಾನುಸಾರ ಪಟ್ಟಿಯಿಂದ ಕೈಬಿಡುವ ಕುರಿತು ಅಧಿಕಾರಿಗಳು ಮಾಹಿತಿ ನೀಡಿದರು. ಮತದಾರರ ಪಟ್ಟಿಯು ಸಂಪೂರ್ಣ ನಿಖರವಾಗಿರಲು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಚುನಾವಣಾ ಅಧಿಕಾರಿಗಳೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ತಹಸೀಲ್ದಾರ್ ಮಂಜುನಾಥ್ ಭೋಗಾವತಿ ತಿಳಿಸಿದರು. ಯಾವುದೇ ಅರ್ಜಿ ಅಥವಾ ಆಕ್ಷೇಪಣೆಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸುವಂತೆ ಅವರು ಮನವಿ ಮಾಡಿದರು.

ಸಭೆಯಲ್ಲಿ ಚುನಾವಣಾ ವಿಭಾಗದ ಅಧಿಕಾರಿಗಳು ಎಸ್ಐಆರ್ ಪ್ರಕ್ರಿಯೆಯ ಮಹತ್ವ, ಅನುಸರಿಸಬೇಕಾದ ನಿಯಮಗಳು ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅಗತ್ಯದ ಕುರಿತು ವಿವರಿಸಿದರು. ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಪ್ರತಿನಿಧಿಗಳು ಹಾಗೂ ಚುನಾವಣಾ ವಿಭಾಗದ ಅಧಿಕಾರಿಗಳು ಉಪಸ್ಥಿತರಿದ್ದರು.

### ಮಸ್ಕಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಆರೋಗ್ಯ ಇಲಾಖೆಯ ಆಶ್ರಯದಲ್ಲಿ ಸರ್ಕಾರಿ ಅಂಗನವಾಡಿ ಮಕ್ಕಳಿಗೆ ಆರೋಗ್ಯ ತಪಾಸಣಾ ಶಿಬಿರ

## ಆರೋಗ್ಯ ತಪಾಸಣೆ ಆರಂಭಿಕ ಹಂತದಲ್ಲೇ ಆರೋಗ್ಯ ಸಮಸ್ಯೆ ಪತ್ತೆಗೆ ಒತ್ತು

❏ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಮಕ್ಕಳ ಆರೋಗ್ಯವೇ ರಾಷ್ಟ್ರದ ಆರೋಗ್ಯ ಎಂಬ ಧ್ಯೇಯದೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಂಗನವಾಡಿ ಮಕ್ಕಳಿಗೆ ಮಂಗಳವಾರ ಸಮಗ್ರ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಿ, ನೂರಾರು ಮಕ್ಕಳ ಆರೋಗ್ಯವನ್ನು ಪರಿಶೀಲಿಸಲಾಯಿತು.**

ಶಿಬಿರದಲ್ಲಿ ಮಕ್ಕಳ ಎತ್ತರ, ತೂಕ, ಪೌಷ್ಟಿಕಾಂಶದ ಮಟ್ಟ, ಕಣ್ಣು, ಕಿವಿ, ಹಲ್ಲು ಸೇರಿದಂತೆ ವಿವಿಧ ಆರೋಗ್ಯ ಪರೀಕ್ಷೆಗಳನ್ನು ನಡೆಸಲಾಯಿತು. ಆರಂಭಿಕ ಹಂತದಲ್ಲೇ ಆರೋಗ್ಯ ಸಮಸ್ಯೆಗಳನ್ನು ಗುರುತಿಸಿ ಸೂಕ್ತ ಚಿಕಿತ್ಸೆ ಹಾಗೂ ಮುಂದಿನ ಆರೈಕೆಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ ವೈದ್ಯರು ಮಕ್ಕಳನ್ನು ಸವಿವರವಾಗಿ ತಪಾಸಣೆ ಮಾಡಿದರು. ಮಕ್ಕಳ ತಜ್ಞೆ ಡಾ. ಫರ್ಹತ್ ತಬಸ್ಸುಮ್ ಅವರು ಮಕ್ಕಳ ಆರೋಗ್ಯ ಪರೀಕ್ಷೆ ನಡೆಸಿ, ಪೌಷ್ಟಿಕ ಆಹಾರದ ಮಹತ್ವ, ವೈಯಕ್ತಿಕ ಸ್ವಚ್ಛತೆ, ಸಮಯಕ್ಕೆ ಸರಿಯಾಗಿ ಲಸಿಕೆ ಹಾಗೂ ನಿಯಮಿತ ಆರೋಗ್ಯ ತಪಾಸಣೆಯ ಅಗತ್ಯತೆ ಕುರಿತು ಪೋಷಕರು ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಸಲಹೆ ನೀಡಿದರು. ಇಂತಹ ಆರೋಗ್ಯ ಶಿಬಿರಗಳು ಅಪೌಷ್ಟಿಕತೆ ಸೇರಿದಂತೆ ಮಕ್ಕಳಲ್ಲಿ ಕಾಣಿಸಿಕೊಳ್ಳುವ ವಿವಿಧ ಆರೋಗ್ಯ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಿ ಪರಿಣಾಮಕಾರಿ ಚಿಕಿತ್ಸೆ ನೀಡಲು ನೆರವಾಗುತ್ತವೆ ಎಂದು ತಿಳಿಸಿದರು.



ಶಿಬಿರದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ಹುಸೇನಪ್ಪ, ವೈದ್ಯಾಧಿಕಾರಿ ಡಾ. ಶ್ರೀದೇವಿ, ಎಸ್‌ಟಿಎಸ್ ದೇವರಾಜ್, ಪ್ರಯೋಗಾಲಯ ತಂತ್ರಜ್ಞ ಹರೀಶ್ ಸೇರಿದಂತೆ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಸಕ್ರಿಯವಾಗಿ ಭಾಗವಹಿಸಿ ಆರೋಗ್ಯ ತಪಾಸಣೆಗೆ ಸಹಕರಿಸಿದರು. ಈಸಂದರ್ಭದಲ್ಲಿ, ವಿವಿಧ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರು ಹಾಗೂ ಮಕ್ಕಳ ಪೋಷಕರು ಉಪಸ್ಥಿತರಿದ್ದು, ಮಕ್ಕಳ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸುವಂತೆ ವೈದ್ಯರ ಸಲಹೆಗಳನ್ನು ಆಲಿಸಿದರು.

# ಹೆದ್ದಾರಿ ಮದ್ಯೆಜಮೀನುಗಳಿಗೆ ತೆರಳಲು ಸೇತುವೆ ನಿರ್ಮಾಣಕ್ಕೆ ರೈತರ ಆಗ್ರಹ

## ಪರಿಹಾರ ನೀಡದೆ ಮನೆ ತೆರವು ವಿಷ ಸೇವಿಸಿದ ಮನೆ ಮಾಲೀಕ, ವಿಷ ಕುಡಿದರು ಬಿಡದೆ ಮನೆ ತೆರವು –ಹೆಚ್ಚಿನ ಪರಿಹಾರಕ್ಕೆ ಮಹಿಳೆಯಕಣ್ಣೀರು

❏ ನೈಜ್ಯ ದೆಸೆ ನ್ಯೂಸ್

**ಕವಿತಾಳ: (ವರದಿ ಕವಿತಾ ಹಿರೇಮಠ) ಪಟ್ಟಣ ಸಮೀಪದ ಹಿರೇಹಣಗಿ ಬಳಿ ಬೆಳಗಾವಿ –ರಾಯಚೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬಾಕ್ಸ್ ಕಲ್ವರ್ಟ್ ಬದಲಿಗೆ ಸೇತುವೆ ನಿರ್ಮಾಣ-ಕ್ಕೆ ಆಗ್ರಹಿಸಿ ರೈತರು ಇಂದು ಕಾಮಗಾರಿ ತಡೆದರು. ಹೀಗಾಗಿ ಅಧಿಕಾರಿಗಳು ಹೆಚ್ಚಿನ ಪೊಲೀಸ್ ಬಂದೋಬಸ್ತ್‌ನಲ್ಲಿ ಸ್ಥಳಕ್ಕೆ ಆಗಮಿಸಿ ರೈತರ ವಿರೋಧದ ನಡುವೆ ಕಾಮಗಾರಿ ಆರಂಭಿಸಿದರು.**

'ಬಾಕ್ಸ್ ಕಲ್ವರ್ಟ್ ನಿರ್ಮಾಣದಿಂದ ಜಮೀನು ಸಂಪರ್ಕಿಸುವ ರಸ್ತೆ ಇಲ್ಲದಂತಾಗಿ 3 ಸಾವಿರ ಎಕರೆ ಪ್ರದೇಶದಲ್ಲಿ ಕೃಷಿ ಚಟುವಟಿಕೆಗೆ ಹಿನ್ನಡೆ ಉಂಟಾಗಲಿದೆ, 10 ಅಡಿ ಎತ್ತರದ ಸೇತುವೆ ನಿರ್ಮಾಣ ಮಾಡುವಂತೆ ಜಿಲ್ಲಾಧಿಕಾರಿಗಳು, ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸೇರಿದಂತೆ ಸಂಸದರಿಗೂ ಮನವಿ ಸಲ್ಲಿಸಲಾಗಿತ್ತು, ಸೇತುವೆ ನಿರ್ಮಾಣ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವ ಬರವಸೆಯನ್ನು



ನೀಡಿದ್ದರು, ಇದೀಗ ಪೊಲೀಸ್ ಬಂದೋಬಸ್ತ್ ಬಳಸಿಕೊಂಡು ಕಾಮಗಾರಿಗೆ ಮುಂದಾಗಿದ್ದಾರೆ' ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. '180 ಮೀಟರ್ ಹತ್ತಿರದಲ್ಲಿ ಈಗಾಗಲೇ ಸೇತುವೆ ನಿರ್ಮಾಣ ಮಾಡಲಾಗಿದೆ, ಅಲ್ಲಿಂದ ಜಮೀನುಗಳಿಗೆ ಸಂಪರ್ಕಿಸಲು ಸರ್ವೀಸ್ ರಸ್ತೆ ನಿರ್ಮಿಸಲಾಗುತ್ತಿದೆ, ಜಿಲ್ಲಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದು ಕಡಿಮೆ ಅಂತರದಲ್ಲಿ ಎರಡು ಸೇತುವೆ ನಿಮಾಣಮಾಡಲು ಅವಕಾಶವಿಲ್ಲಾ' ಎಂದು ಉಪ ವಿಭಾಗಾಧಿಕಾರಿ ಪಂಪಣ್ಣ ಸಜ್ಜನ್ ತಿಳಿಸಿದರು.

ಹೆದ್ದಾರಿ ನಿರ್ಮಾಣಕ್ಕೆ ತೆರವುಗೊಳಿಸಿದ ಮನೆಗಳಿಗೆ ಪರಿಹಾರ ನೀಡುವಲ್ಲಿ ತಾರತಮ್ಯ



ಮಾಡಲಾಗಿದೆ ತಮಗೆ ಪರಿಹಾರ ಕೇವಲ ನಾಲ್ಕು ಲಕ್ಷ ಪರಿಹಾರ ಸಿಕ್ಕಿದ್ದು ಪಕ್ಕದ ಮನೆಯವರಿಗೆ 30 ಲಕ್ಷ ಪರಿಹಾರ ನೀಡಲಾಗಿದೆ, ಮನೆ ಕಳೆದುಕೊಂಡು ಕುಟುಂಬ ಬೀದಿಗೆ ಬಂದಿದೆ; ಎಂದು ನವೀನಕುಮಾರ ಮತ್ತು ಭೀಮಣ್ಣ ಅವರು ಕಣ್ಣಿರು ಹಾಕಿದರು. ನ್ಯಾಯಾಲಯದ ಮೂಲಕ ಹೆಚ್ಚಿನ ಪರಿಹಾರ ಪಡೆಯಲು ಅವಕಾಶವಿದ್ದು ಈ ಕಉ-ರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಮಾಹಿತಿಯನ್ನು ಪಡೆಯುವಂತೆ ಸೂಚಿಸಿದರು. ಹೆದ್ದಾಋಇ ಪ್ರಾಧಿಕಾರದ ಭೂ ಸ್ವಾಧೀನ ಅಧಿಕಾರಿ ಗುರುಲಿಂಗಯ್ಯ ಹಿರೇಮಠ, ಸಿರವಾರ ತಹಸೀಲ್ದಾರ್ ಅಶೋಕ್ ಪವಾರ್, ಗುತ್ತಿಗೆದಾರ ಕಂಪನಿಯ ಸಹಾಯಕ ವ್ಯವಸ್ಥಾಪಕ ಭೀಮರಾವ್, ಡಿವೈಎಸ್‌ಪಿ ಚಂದ್ರಶೇಖರ, ಸಿಪಿಐ ಶಶಿಕಾಂತ ಎಂ. ಸಿರವಾರ, ಕವಿತಾಲ, ಮಾನ್ವಿ ಪಿಎಸ್‌ಐಗಳು ಮತ್ತು ಮೀಸಲು ಪಡೆ ಪೊಲೀಸರು ಉಪಸ್ಥಿತರಿದ್ದರು.

ವಿಷ ಕುಡಿದರೂ ಬಿಡದೆ ಮನೆ ತೆರವು ಹೆದ್ದಾರಿ ನಿರ್ಮಾಣಕ್ಕೆ ಪರಿಹಾರ ನಿಡದೆ ಮನೆ ತೆರವುಗೊಳಿಸಲಾಗುತ್ತಿದೆ ಎಂದು ಆರೋಪಿಸಿ ಮನೆ ಮಾಲೀಕ ನವೀನಕುಮಾರ ವಿಷ ಸೇವಿಸಿದರು, ತಕ್ಷಣವೆ ಅವರನ್ನು ಪೊಲಿಸ್ ವ್ಯಾನ್‌ನಲ್ಲಿ ಕವಿತಾಳ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆ ತರಲಾಯಿತು, ಆರೋಗ್ಯ ತಪಾಸಣೆ ಮಾಡಿದ ಇಲ್ಲಿನ ವೈದ್ಯರು ಅವರನ್ನು ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾ ರಿಮ್ಸ್ ಆಸ್ಪತ್ರೆ ಸಾಗಿಸಲಾಯಿತು, ಇಷ್ಟೆಲ್ಲ ಆದ-ರೂ ಸಹ ಮಾನವಿಯತೆಯನ್ನು ಮರೆತ ಅಧಿಕಾ-ರಿಗಳು ಮನೆಯನ್ನು ತೆರವುಗೊಳಿಸಿದರು, ಅಧಿಕಾ-ರಿಗಳ ನೆಡೆಗೆ ಗ್ರಾಮಸ್ಥರು ಹಿಡಿ ಶಾಪಹಾಕುವ ಮೂಲಕ ತಮ್ಮ ಬೇಸರ ವ್ಯಕ್ತಪಡಿಸಿದರು.

## ನೇಮಕಾತಿ ಪ್ರಕಟಣೆ

**RCFL ನೇಮಕಾತಿ 2026 94 ಮ್ಯಾನೇಜ್‌ಮೆಂಟ್ ಟ್ರೈನಿ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ.**

ರಾಷ್ಟ್ರೀಯ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಲಿಮಿಟೆಡ್ (RCFL) ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ 94 ಮ್ಯಾನೇಜ್‌ಮೆಂಟ್ ಟ್ರೈನಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಮಹಾರಾಷ್ಟ್ರದ ರಾಯಗಢ, ಮುಂಬೈ ಮತ್ತು ಥಾಣೆ ಪ್ರದೇಶಗಳಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 15-ಆಗಸ್ಟ್-2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: rcfltd.com

## ಜಂತು ಹುಳು ನಿವಾರಣೆ ಯಶಸ್ಸಿಗೊಳಿಸಲು ಸಹಕರಿಸಿ : ಬಸವಣ್ಣೆಪ್ಪ ಕಲಶೆಟ್ಟಿ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ತಾಲೂಕಿನಲ್ಲಿ ಅಗಸ್ಟ್ 10ರಂದು ಆರೋಗ್ಯ ಇಲಾಖೆ ವತಿಯಿಂದ ಯಿಂದ ಹಮ್ಮಿಕೊಳ್ಳಲಾಗುವ ರಾಷ್ಟ್ರೀಯ ಜಂತು ಹುಳು ನಿವಾರಣ ಯಶಸ್ವಿಗೊಳಿಸಲು ಸಹಕರಿಸುವಂತೆ ಸಹಾಯಕಆಯುಕ್ತಬಸವಣ್ಣೆಪ್ಪಕಳಶಟ್ಟಿಹೇಳಿದರು.**




ಅವರಿಂದು ಸಹಾಯಕ ಆಯುಕ್ತರ ಕಚೇರಿಯ ವಿ ಸಿ ಹಾಲ್ ನಲ್ಲಿ ನಡೆದ ತಾಲೂಕು ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿಯವರು ತಾಲೂಕಿನ ಎಲ್ಲ ಅಂಗನವಾಡಿ ಮಕ್ಕಳು ಸೇರಿದಂತೆ ಶಾಲೆ ಕಾಲೇಜುಗಳಲ್ಲಿನ 19 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಆ.10ರಂದು ಆಯಾ ವಿದ್ಯಾ ಕೇಂದ್ರಗಳಿಗೆ ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಯವರು ಜಂತು ನಿವಾರಕ ಅಲ್ಬೆಂಡಾಜೋಲ್ 400 ಎಂ.ಜಿ ಮಾತ್ರೆ ನೀಡುವರು . ತಾಲೂಕಿನ ಎಲ್ಲ ಖಾಸಗಿ ಹಾಗೂ ಸರ್ಕಾರಿ ಶಾಲಾ ಶಿಕ್ಷಕರಿಗೆ ಶಿಕ್ಷಣಾಧಿಕಾರಿಗಳು ಮತ್ತು ಶಿಶು ಅಭಿವೃದ್ಧಿ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲಾ ಮುಖ್ಯಸ್ಥರಾಗಿ ಸೂಚನೆ ನೀಡಲು ಮತ್ತು ಮೇಲ್ವಿಚಾರಣೆ ಮಾಡಬೇಕು ತಾಲೂಕ ಆರೋಗ್ಯಾಧಿಕಾರಿ ಡಾ: ಹನ್ಮಂತರಾಯ ತಳ್ಳಳ್ಳಿ ಮಾತನಾಡಿ ಲಿಂಗಸಗೂರ ತಾಲೂಕಿನಲ್ಲಿ 127330 ಮಕ್ಕಳಿಗೆ ಅಲ್ಬೆಂಡಾಜೋಲ್ ಚೀಪಬಹುದಾದ ಮಾತ್ರೆ ನೀಡುವ ಗುರಿ ಇದೆ. ಜಂತು ಹುಳು ಬಾಧೆಯಿಂದ ಮಕ್ಕಳ ಬೌದ್ಧಿಕ ಬೆಳವಣಿಗೆ ಕುಂಠಿತವಾಗುತ್ತದೆ.

ರಕ್ತ ಹೀನತೆ ಮುಂತಾದ ತೊಂದರೆಯಿಂದ ಮುಕ್ತವಾಗಲು ಈ ಮಾತ್ರೆ ಪ್ರಯೋಜನ ಕಾರಿಯಾಗಿದೆ. ಆರೋಗ್ಯವಂತರಾಗಿದ್ದರೂ ವರ್ಷದಲ್ಲಿ ಎರಡು ಬಾರಿ ಸೇವಿಸಬೇಕು.ಯಾವುದೇ ಅಡ್ಡಪ-ರಿಣಾಮ ಇರುವುದಿಲ್ಲ ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ತಹಸೀಲ್ದಾರ ಶಟ ಸತ್ಯಮ್ಮ. ಕಾರ್ಯ ನಿರ್ವಾಹಕ ಅಧಿಕಾರಿ ಉಮೇಶ. ಶಿಕ್ಷಣ ಇಲಾಖೆಯ ಬಸವರಾಜ ಕರಡಿ. ಪುರಸಭೆ ಮುಖ್ಯಾಧಿಕಾರಿ ನಟ-ರಾಜ.ಅಲ್ಪಸಂಖ್ಯಾತರ ಇಲಾಖೆಯ ಷಡಕ್ಷರಿ. ಹಿಂದುಳಿದ ವರ್ಗಗಳ ಅಧಿಕಾರಿ ರಮೇಶ ರಾಠೋಡ.ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ ಜೋಶಿ ಹಾಗೂ ಇತರ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಹಾಜರಿದ್ದರು.

## ಆ.7ರ ಒಳಗಾಗಿ ನೀರಾವರಿ ಸಲಹಾ ಸಮಿತಿ ಸಭೆ ಕರೆದು, ನೀರು ಹರಿಸುವಂತೆ ಮನವಿ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಆ.7ರ ಒಳಗಾಗಿ ತುಂಗಭದ್ರಾ ಮುನಿರಾಬಾದ್ ಕೇಂದ್ರ ಕಚೇರಿಯಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ಕರೆದು, ರೈತರಿಗೆ ಬೆಳೆ ಬೆಳೆಯಲು ನೀರು ಒದಗಿಸಿ ಕೊಡಬೇಕೆಂದು ಆಗ್ರಹಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಬಿ.ವಿ.ಗೌಡ ನೇತೃತ್ವದಲ್ಲಿ ಹೊಸಪೇಟೆಯ ಮುನಿರಾಬಾದ್‌ನ ಜಲಾಶಯದ ನೀರಾವರಿ ಕೇಂದ್ರ ವಲಯದ ಕಛೇರಿಯಲ್ಲಿ ಅಧೀಕ್ಷಕ ಅಭಿಯಂತರ ಎಸ್.ಜಿ.ಮಲ್ಲಿಗರಾವ್ ಇವರಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿದರು.**



ನಂತರ ಬಿ.ವಿ.ಗೌಡ ಮಾತನಾಡಿ, ಈ ಬಾರಿ ಮುಂಗಾರು ತಡವಾಗಿ ಬಂದಿದ್ದು ಮಳೆಯ ಪ್ರಮಾಣ ಕಡಿಮೆಯಾಗಿದ್ದು ನಮ್ಮೆಲ್ಲರ ಗಮನಕ್ಕೆ ಇದೆ. ಕಳೆದ 4-5 ದಿನಗಳಿಂದ ಮೇಲ್ಭಾಗದಲ್ಲಿ ಮಳೆ ಚೆನ್ನಾಗಿ ಆಗುತ್ತಿದ್ದು, ರೈತರಲ್ಲಿ ಸಂತಸ ಮೂಡಿದೆ. ಪ್ರಸ್ತುತ ತುಂಗಭದ್ರಾ ಜಲಾಶಯದಲ್ಲಿ ಅಂದಾಜು 45.00 ಟಿಎಂಸಿ ನೀರು ಇದ್ದು, ಪ್ರಸ್ತುತ 40,000 ಕ್ಯೂಸೆಕ್ಸ್ ಗಳಿಗಿಂತಲೂ ಹೆಚ್ಚು ನೀರು ಜಲಾಶಯಕ್ಕೆ ಹರಿದು ಬರುತ್ತಿದ್ದು ಮಾಹಿತಿಯ ಪ್ರಕಾರ ಈ ಒಳಹರಿವಿನ ಪ್ರಮಾಣ ನಾಳೆಯಿಂದ ಇನ್ನು ಹೆಚ್ಚಾಗಲಿದ್ದು ತುಂಗಾ ಡ್ಯಾಮ್‌ನಿಂದ ಹೆಚ್ಚಿನ ನೀರು ಬಿಡುಗಡೆಯಾಗಿದ್ದು ಜಲಾಶಯಕ್ಕೆ ಹೆಚ್ಚಿನ ನೀರು ಬರುವ ನಿರೀಕ್ಷೆ ಇದೆ. ಹಾಗೆಯೇ ತುಂಗಭದ್ರಾ ಜಲಾಶಯವು ತುಂಬಬಹುದೆಂಬ ಆಶಯದಲ್ಲಿದ್ದು, ಕೂಡಲೇ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಮುನಿರಾಬಾದ್ ಕೇಂದ್ರ ಕಚೇರಿಯಲ್ಲಿ ನಡೆಸಬೇಕು ಮತ್ತು ಸಭೆಯಲ್ಲಿ ಎಲ್ಲಾ ರೈತ ಮುಖಂಡರಿಗೆ ಮತ್ತು ರೈತರಿಗೆ ಅವಕಾಶ ಕಲ್ಪಿಸಬೇಕು. ಪ್ರಸ್ತುತ 45.00 ಟಿಎಂಸಿ ನೀರು ಇದ್ದು, ಒಳಹರಿವು ಹೆಚ್ಚಿರುವುದರಿಂದ ತುಂಗಭದ್ರ ನದಿ ಪಾತ್ರ, ಎಲ್.ಎಲ್.ಸಿ ಮತ್ತು ಹೆಚ್.ಎಲ್.ಸಿ ಕಾಲುವೆ ರೈತರಿಗೆ ಬೆಳೆ ಬೆಳೆಯಲು ನೀರನ್ನು ಹರಿಸಬೇಕು ಹಾಗೆಯೇ ವಿಜಯನಗರ ಕಾಲುವೆ ಸೇರಿದಂತೆ ಇತರೆ ಕಾಲುವೆ ಆಶ್ರಿತ ಪ್ರದೇಶದಲ್ಲಿ ಬೆಳೆದ ರೈತರ ಬೆಳೆಗಳಿಗೆ ನೀರು ಬಿಡಬೇಕು. ಒಂದು ವೇಳೆ ಆ.7ರ ಒಳಗೆ ಸಭೆ ಕರೆದು ರೈತರಿಗೆ ನೀರು ಬಿಡುವ ಕಾರ್ಯ ಮಾಡದಿದ್ದ ಪಕ್ಷದಲ್ಲಿ ಎಲ್ಲಾ ರೈತರು ಮುನಿರಾಬಾದ್ ಕೇಂದ್ರ ಕಚೇರಿಗೆ ಮುತ್ತಿಗೆ ಹಾಕಲಾಗುತ್ತದೆ ಎಂದರು. ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಖಾಜಾಹುಸೇನ್ ನಿಯಾಜಿ ಸೇರಿದಂತೆ ರೈತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ನಕಲಿ ಕ್ರಿಮಿನಾಶಕ ಮಾರಾಟ ಸೂಕ್ತ ಕಾನೂನು ಕ್ರಮಕ್ಕೆ ರೈತ ಸಂಘ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರ: ತಾಲೂಕಿನಲ್ಲಿ ಈಗಾಗಲೇ ಭತ್ತ ನಾಟಿ ಆರಂಭವಾಗಿದ್ದು ರಸಗೊಬ್ಬರ ಮಾರಾಟಗಾರರು ಇದನ್ನ ಬಂಡವಾಳ ಮಾಡಿಕೊಂಡು ಕೃತಕ ಅಭಾವವನ್ನು ಸೃಷ್ಟಿ ಮಾಡುತ್ತಾ ಅಲ್ಲದೇ ಅಕ್ರಮವಾಗಿ ರಸಗೊಬ್ಬರ,**



ಕ್ರಿಮಿನಾಶಕಗಳನ್ನು ಬಯೋಸ್ಟಿಮಿಲೆಂಟ್ ಆ್ಯಕ್ಸ್ ಹೆಸರಿನಲ್ಲಿ ನಕಲಿ ಕ್ರಿಮಿನಾಶಕಗಳನ್ನು ತುಂಬಿ ಕಾಳಸಂತೆಯಲ್ಲಿ ಅತಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿದ್ದು ಕೂಡಲೇ ಇವರ ವಿರುದ್ದ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮುಖಂಡರು ಸಹಾಯಕ ಕೃಷಿ ನಿರ್ದೇಶಕ ಎಸ್ ಮುತ್ತುರಾಜ್ ಹಾಗೂ ತಾಲೂಕ ಕೃಷಿ ಸಹಾಯಕ ನಿರ್ದೇಶಕಿ ಎನ್ ವಿಜಯಾ ಮೂರ್ತಿ ಅವರಿಗೆ ಮನವಿಯನ್ನು ಸಲ್ಲಿಸಿದರು.

ಪಟ್ಟಣದಲ್ಲಿ ರಸಗೊಬ್ಬರ ಹಾಗೂ ಕ್ರಿಮಿನಾಶಕ ಮಾರಾಟ ಮಾಡುವ ಅಂಗಡಿಗಳಲ್ಲಿ ರೈತರು ತಾವು ಖರೀದಿಸಿದ ರಸಗೊಬ್ಬರಗಳ ಖರೀದಿ ಬಿಲ್ ಕೇಳಿದರೆ ಅಂಗಡಿಯ ಮಾಲೀಕರು ರೈತರಿಗೆ ಬಿಳಿ ಚೀಟಿಯಲ್ಲಿ ಬರೆದುಕೊಡುತ್ತಿದ್ದಾರೆ. ಖರೀದಿಯ ಜಿಎಸ್‌ಟಿ ಹೊಂದಿದ ಬಿಲ್ ಕೇಳಿದರೆ ಬೇರೆ ಕ್ರಿಮಿನಾಶಕಗಳ ಹೆಸರನ್ನು ನಮೂದಿಸಿ ಬಿಲ್ ಕೊಡುತ್ತಿದ್ದು ಮತ್ತು ರೈತರು ರಸಗೊಬ್ಬರ ಖರೀದಿಯ ಜಿ ಎಸ್‌ಟಿ ಬಿಲ್ ಕೇಳಿದರೆ ನಮ್ಮ ಅಂಗಡಿಯಲ್ಲಿ ಆ ಗೊಬ್ಬರ ಇಲ್ಲವೆಂದು ಹೇಳುತ್ತಿದ್ದಾರೆ.

ಸಾಲಾ ಸೂಲ ಮಾಡಿ ರೈತರು ಅಂಗಡಿಗಳಲ್ಲಿ ಖರೀದಿಸಿದ ನಕಲಿ ರಸಗೊಬ್ಬರ ಹಾಗೂ ಕ್ರಿಮಿನಾಶಕಗಳಿಂದ ಬೆಳೆಗಳು ಸರಿಯಾಗಿ ಬಾರದೇ ರೈತರು ನಷ್ಟ ಅನುಭವಿಸುವಂತಾಗಿದೆ. ಅಲ್ಲದೇ ತಾಲೂಕಿನ ಕಸಬಾ ಲಿಂಗಸಗೂರು ಗ್ರಾಮದ ದುರ್ಗಾ ಭವಾನಿ ಟ್ರೇಡರ್ಸ್ ನವರು ಅಕ್ರಮ ರಸಗೊಬ್ಬರಗಳ ದಾಸ್ತಾನು ಮಾಡಿಕೊಂಡು ನಕಲಿ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಿದ್ದಾರೆ. ರೈತರನ್ನು ಈ ರೀತಿ ಮೋಸಗೊಳಿಸುತ್ತಿರುವ ರಸಗೊಬ್ಬರ ಹಾಗೂ ಕ್ರಿಮಿನಾಶಕಗಳ ಮಾರಾಟಗಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ವಂಚನೆಗೊಳಗಾದ ರೈತರಿಗೆ ನಷ್ಟ ಪರಿಹಾರವನ್ನು ಮಾರಾಟಗಾರರಿಂದಲೇ ಕೊಡಿಸಬೇಕು. ಒಂದು ವೇಳೆ ನಮ್ಮ ಮನವಿಗೆ ಸ್ಪಂಧಿಸದಿದ್ದರೆ ಕೃಷಿ ಸಹಾಯಕ ನಿರ್ದೇಶಕರ ಕಾರ್ಯಾಲಯದ ಮುಂದೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಶಿವಪುತ್ರಗೌಡ ನಂದಿಹಾಳ, ತಾಲೂಕ ಅಧ್ಯಕ್ಷ ದುರ್ಗಾ ಪ್ರಸಾದ್, ಮಹ್ಮದ್ ಖಾಜಾಸಾಬ, ದುರಗಪ್ಪ ಗೌಡೂರು, ಅಮರೇಶ ದೇವರ ಭೂಪೂರು, ಅಂಬಣ್ಣ, ಹನುಮಂತ ಹಳ್ಳಿ, ಅಮರಯ್ಯ ಸ್ವಾಮಿ, ರಮೇಶ್ ಗೌಡೂರ, ನಾಗಪ್ಪ ಪುಣೇದ್, ಹೊಳೆಪ್ಪ, ಹುಲುಗಪ್ಪ ಸೇ-ರಿದಂತೆ ಹಲವಾರು ರೈತ ಮುಖಂಡರು ಇದ್ದರು.

## ಸಿಂಧನೂರಿನಲ್ಲಿ ಜಿಐಒ ವತಿಯಿಂದ 'ಎಂಬ್ರೇಸಿಂಗ್ ಫೆಮಿನಿನಿಟಿ' ಅಭಿಯಾನ ಉದ್ಘಾಟನೆ ಹಾಗೂ ಬಿಐಇ ಪ್ರತಿಭಾ ಪುರಸ್ಕಾರ ಸಮಾರಂಭ ಯಶಸ್ವಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಗರ್ಲ್ಸ್ ಇಸ್ಲಾಮಿಕ್ ಆರ್ಗನೈಸೇಶನ್ (ಜಿಐಒ) ಸಿಂಧನೂರು ಘಟಕದ ವತಿಯಿಂದ 'ಎಂಬ್ರೇಸಿಂಗ್ ಫೆಮಿನಿನಿಟಿ' ರಾಷ್ಟ್ರೀಯ ಅಭಿಯಾನದ ಉದ್ಘಾಟನಾ ಕಾರ್ಯಕ್ರಮ ಹಾಗೂ ಬೋರ್ಡ್ ಆಫ್ ಇಸ್ಲಾಮಿಕ್ ಎಜುಕೇಶನ್ (BIE) ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿನಿಯರ ಅಭಿನಂದನಾ ಸಮಾರಂಭವು ನಗರದ ಪಟೇಲ್ ವಾಡಿಯ ಮಸ್ಜಿದ್-ಎ-ಹುದಾದಲ್ಲಿ ಯಶಸ್ವಿಯಾಗಿ ನಡೆಯಿತು.**




ಕಾರ್ಯಕ್ರಮವನ್ನು ಜಿಐಒ ಸಿಂಧನೂರು ಘಟಕದ ಜಂಟಿ ಕಾರ್ಯದರ್ಶಿ ತೈರೀನ್ ಅವರು ನಿರೂಪಿಸಿದರು. ಪವಿತ್ರ ಕುರ್‌ಆನ್ ಪಠಣವನ್ನು ಸೈಯದಾ ತಾಹಿಯಾ ರಿಝ್ವಿ ಅವರು ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಬಳಿಕ ಜಿಐಒ ಸಿಂಧನೂರು ಘಟಕದ ಸ್ಥಳೀಯ ಕಾರ್ಯದರ್ಶಿ ಸೈಯದಾ ಸುಮಯ್ಯ ಅವರು ಉದ್ಘಾಟನಾ ಭಾಷಣ ಮಾಡಿ, 'ಎಂಬ್ರೇಸಿಂಗ್ ಫೆಮಿನಿನಿಟಿ' ರಾಷ್ಟ್ರೀಯ ಅಭಿಯಾನದ ಉದ್ದೇಶವನ್ನು ಪರಿಚಯಿಸಿದರು. ಇಸ್ಲಾಮಿನ ಮೌಲ್ಯಗಳ ಆಧಾರದ ಮೇಲೆ ಮಹಿಳೆಯರು ತಮ್ಮ ನೈಜ ವ್ಯಕ್ತಿತ್ವವನ್ನು ಅರಿತು, ಅದನ್ನು ಗೌರವದಿಂದ ಅಳವಡಿಸಿಕೊಳ್ಳುವ ಅಗತ್ಯವನ್ನು ಅವರು ಒತ್ತಿಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮೊಹಮ್ಮದ್ ಆಯಿಷಾ ಸಿದ್ದೀಖಾ (ಹಾಫಿಝ್-ಎ-ಕುರ್‌ಆನ್, ಮುಸ್ಲಿಮಾ, ಮದ್ರಸಾ-ಎ-ಜಾಮಿಯಾ ಅಲ್ ಮೊಮಿನಾತ್, ಮಾನ್ವಿ) ಅವರು ಮುಖ್ಯ ಭಾಷಣ ಮಾಡಿದರು. ಮಹಿಳತ್ವವು ಅಲ್ಲಾಹನು ಮಹಿಳೆಗೆ ನೀಡಿರುವ ಅಮೂಲ್ಯ ವರವಾಗಿದ್ದು, ಅದು ಮಹಿಳೆಯ ನೈಸರ್ಗಿಕ ಗುರುತಾಗಿದೆ ಎಂದು ತಿಳಿಸಿದರು. ಇಸ್ಲಾಂ ಮಹಿಳೆಗೆ ಗೌರವ, ಘನತೆ ಮತ್ತು ರಕ್ಷಣೆಯನ್ನು ನೀಡಿದ ಧರ್ಮವಾಗಿದ್ದು, ಜಾಹಿಲಿಯ್ಯದ ಕಾಲದೊಂದಿಗೆ ಹೋಲಿಕೆ ಮಾಡಿದಾಗ ಮಹಿಳೆಯ ಸ್ಥಾನಮಾನವನ್ನು ಉನ್ನತ ಮಟ್ಟಕ್ಕೆ ಏರಿಸಿದೆ ಎಂದು ವಿವರಿಸಿದರು.

ಮಹಿಳತ್ವವು ದುರ್ಬಲತೆಯ ಸಂಕೇತವಲ್ಲ; ಬದಲಾಗಿ ಲಜ್ಜೆ, ಸೌಂದರ್ಯ, ಸಂಯಮ ಹಾಗೂ ಸಮತೋಲನದ ಪ್ರತೀಕವಾಗಿದೆ ಎಂದು ಅವರು ಹೇಳಿದರು. ಇಂದಿನ ಸಮಾಜದಲ್ಲಿ ಪುರುಷರನ್ನು ಅನುಕರಿಸುವ ಪ್ರವೃತ್ತಿ ಮಹಿಳೆಯ ನೈಜ ಗುರುತಿಗೆ ಧಕ್ಕೆ ಉಂಟುಮಾಡಬಹುದು ಎಂದು ಎಚ್ಚರಿಸಿದರು. ಶಿಕ್ಷಣ ಅತ್ಯಗತ್ಯವಾದರೂ ಅದು ಇಸ್ಲಾಮಿನ ಮಿತಿಯೊಳಗೆ ಇರಬೇಕು ಎಂದು ತಿಳಿಸಿದ ಅವರು, ಪರ್ದಾ ಹಾಗೂ ಇಸ್ಲಾಮಿಕ್ ಉಡುಪು ಮಹಿಳೆಯ ಗೌರವ ಮತ್ತು ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಾಗಿವೆ ಎಂದು ಹೇಳಿದರು. ಮಹಿಳೆಯ ನಿಜವಾದ ಯಶಸ್ಸು ಮತ್ತು ಗೌರವವು ತನ್ನ ಸ್ವಭಾವವನ್ನು ಅರಿತು ಇಸ್ಲಾಮಿನ ತತ್ವಗಳನ್ನು ಅನುಸ-ರಿಸುವುದರಲ್ಲಿ ಅಡಗಿದೆ ಎಂದು ಅಭಿಪ್ರಾಯಪಟ್ಟರು.

ಸಮಾರೋಪ ಭಾಷಣ ಮಾಡಿದ ಸಯ್ಯದ್ ಮುಸ್ತಫಾ ಖಾದ್ರಿ (ಶಿಕ್ಷಣತಜ್ಞರು, ಉಇಒಖ ಇಜಣಭಿಚಿಣುಠಟಿ, ಗಂಇ) ಅವರು ಇಸ್ಲಾಮಿಕ್ ಶಿಕ್ಷಣದ ಮಹತ್ವವನ್ನು ವಿವರಿಸಿದರು. ಇಸ್ಲಾಮಿಕ್ ಶಿಕ್ಷಣವು ದೃಢವಾದ ಇಮಾನ್, ಉತ್ತಮ ನೈತಿಕತೆ ಹಾಗೂ ಸರಿ-ತಪ್ಪನ್ನು ಗುರುತಿಸುವ ಸಾಮರ್ಥ್ಯವನ್ನು ಬೆಳೆಸುತ್ತದೆ ಎಂದು ತಿಳಿಸಿದರು. ಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಂಡು ಅದರ ಬೋಧನೆಗಳನ್ನು ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಲು ಇಸ್ಲಾಮಿಕ್ ಶಿಕ್ಷಣ ಅತ್ಯಗತ್ಯವಾಗಿದೆ ಎಂದು ಹೇಳಿದರು. ಜೊತೆಗೆ, ಇದು ವ್ಯಕ್ತಿತ್ವ ವಿಕಾಸ, ಶಿಸ್ತು ಹಾಗೂ ಸಾಮಾಜಿಕ ಜವಾಬ್ದಾ-ರಿಯನ್ನು ಬೆಳೆಸುವುದರೊಂದಿಗೆ ಯುವಜನರನ್ನು ತಪ್ಪು ಚಿಂತನೆಗಳು ಮತ್ತು ನಕಾರಾತ್ಮಕ ಪ್ರಭಾವಗಳಿಂದ ರಕ್ಷಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಮಾಅತೆ ಇಸ್ಲಾಮಿ ಹಿಂದ್ (JIH) ಸಿಂಧನೂರು ಘಟಕದ ಸ್ಥಳೀಯ ಅಧ್ಯಕ್ಷರಾದ ಹುಸೇನ್ ಸಾಬ್ ಅವರು ಉಪಸ್ಥಿತ-ರಿದ್ದು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಬಳಿಕ ಬೋರ್ಡ್ ಆಫ್ ಇಸ್ಲಾಮಿಕ್ ಎಜುಕೇಶನ್ (ಃಖಇ) ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ವಿತರಿಸಿ, ಅವರ ಸಾಧನೆಯನ್ನು ಶ್ಲಾಘಿಸಿ ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಸಾಧನೆ ಮಾಡಲು ಪ್ರೋತ್ಸಾಹಿಸಿದರು.ಇದೇ ಸಂದರ್ಭದಲ್ಲಿ ಜಮಾಅತೆ ಇಸ್ಲಾಮಿ ಹಿಂದ್ ಮಹಿಳಾ ವಿಭಾಗದ ಸಿಂಧನೂರು ಘಟಕದ ಜಂಟಿ ಕಾರ್ಯದರ್ಶಿ ಅತಿಯಾ ಫೌಜಿಯಾ ಅವರು ಸಹ ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ಸಿಗೆ ಶುಭ ಹಾರೈಸಿದರು.

ಈ ಕಾರ್ಯಕ್ರಮವನ್ನು ಜಿಐಒ ಸಿಂಧನೂರು ಘಟಕದ ಸ್ಥಳೀಯ ಅಧ್ಯಕ್ಷೆ ನೆಹಾ ಸಮ್ರೀನ್ ಅವರ ನೇತೃತ್ವದಲ್ಲಿ ಅತ್ಯಂತ ಅಚ್ಚುಕಟ್ಟಾಗಿ ಮತ್ತು ಯಶಸ್ವಿಯಾಗಿ ಆಯೋಜಿಸಲಾಗಿ-ತ್ತು. ಕಾರ್ಯಕ್ರಮದ ಯೋಜನೆ, ಸಮನ್ವಯ ಹಾಗೂ ನಿರ್ವಹಣೆಯನ್ನು ಅವರು ಸಮಥ-ರ್ವಾಗಿ ನಿರ್ವಹಿಸಿದ್ದರಿಂದ ಕಾರ್ಯಕ್ರಮವು ಅಥ-ರ್ಪೂರ್ಣವಾಗಿ ಮತ್ತು ಯಶಸ್ವಿಯಾಗಿ ನೆರವೇರಿತು. ಕಾರ್ಯಕ್ರಮದ ಅಂತ್ಯದಲ್ಲಿ ಜಿಐಒ ಪದಾಧಿಕಾರಿಗಳು ವಿಜೇತ ವಿದ್ಯಾರ್ಥಿನಿಯರನ್ನು ಅಭಿನಂದಿಸಿದರು. ಸುಮಾರು 150ಕ್ಕೂ ಹೆಚ್ಚು ಸದಸ್ಯೆಯರು, ವಿದ್ಯಾರ್ಥಿನಿಯರು, ಪೋಷಕರು ಹಾಗೂ ಗಣ್ಯ ಅತಿಥಿಗಳು ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ವರದಿ: ಜಿಐಒ ಸಿಂಧನೂರು

## ಸ್ತನ್ಯಪಾನ ತಾಯಿ ಮಮತೆಯ ಪ್ರತೀಕ: ಗೀತಾ ಹಿರೇಮಠ ಅಭಿಪ್ರಾಯ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸ್ತನ್ಯಪಾನವು ತಾಯಿ ಮತ್ತು ಮಗುವಿನ ಬಾಂಧವ್ಯ ಹೆಚ್ಚಿಸುವ ಒಂದು ಮಮತೆಯ ಪ್ರತೀಕವಾಗಿದೆ ಮಗು ಜನಿಸಿದ ಅರ್ಧ ಗಂಟೆಯೊಳಗೆ ತಾಯಿ ಹಾಲು ಕುಡಿಸಲು ಪ್ರಾರಂಭಿಸಬೇಕು ತಾಯಿಯ ಮೊದಲ ಗಿಣ್ಣು ಹಾಲು ಉಣಿಸುವುದ-ರಿಂದ ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಬೆಳೆಯುತ್ತದೆ. ತಾಯಿ ಮಗುವನ್ನು ಬೇರೆಯಾಗಿ ಮಲಗಿಸಬಾರದು ಎಂದು ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಹೇಳಿದರು.**



ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ, ಹಾಗೂ ಮಕ್ಕಳ ಮತ್ತು ಶಿಶು ಅಭಿವೃದ್ಧಿ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ ಬಾದರ್ಲಿ ಇವರ ಸಂಯುಕ್ತಾಶ್ರಯದಲ್ಲಿ ಬಾದರ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಬೆಳಗುರ್ಕಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೊದಲ ಮೂರು ದಿನ ಬಾಣಂತಿ ಮಗುವಿಗೆ ಅತ್ತಾಗಲೆಲ್ಲಾ ಹಾಲುಣಿಸಲು ಪ್ರೇರೇಪಿಸುವುದು ಮಗು ತಾಯಿ ಎದೆ ಭಾಗವನ್ನು ಚೀಪಿದಾಗ ಆಕ್ಸಿಟೋಸಿನ್ ಬಿಡುಗಡೆಯಾಗಿ ತಾಯಿ ಗರ್ಭಕೋಶ ತಾನಾಗಿಯೇ ಕುಗ್ಗುವುದಲ್ಲದೆ, ಬಾಣಂತಿಯಲ್ಲೇ ರಕ್ತಸ್ರಾವವನ್ನು ಕಡಿಮೆಯಾಗಿಸುತ್ತದೆ.

ಆದಕಾರಣ ತಾಯಿ ಆರೋಗ್ಯವು ಕೂಡ ಸುಧಾರಣೆ ಆಗುತ್ತದೆ. ಅತಿಯಾದ ರಕ್ತಸ್ರಾವದಿಂದ ಬಾಣಂತಿಗಳ ಮರಣದ ಪ್ರಮಾಣವು ಸಹ ಕುಗ್ಗುತ್ತದೆ. ಸ್ತನ್ಯಪಾನ ಮಾಡುವುದರಿಂದ ಶೇ.22ರಷ್ಟು ಮಕ್ಕಳ ಸಂಖ್ಯೆ ಕಡಿಮೆ ಮಾಡಬಹುದು. ಮಗುವನ್ನು ತಾಯಿಯ ಅತಿ ಸಮೀಪದಲ್ಲಿ ಮಲಗಿಸಬೇಕು ತಾಯಿ ಎದೆ ಭಾಗವು ಮಗುವಿಗೆ ತಾಗುವಂತಿ-ರಬೇಕು ಆಗ ಮಗುವಿನ ಸುರಕ್ಷತಾ ಭಾವವು ಬಲಗೊಳ್ಳುವುದು ಮಗುವಿನ ಸ್ಪರ್ಶ ತಾಯಿಯ ಸ್ತನಗಳಲ್ಲಿ ಹಾಲಿನ ಉತ್ಪಾದನೆಗೆ ಪ್ರಚೋದಿಸುತ್ತದೆ.

ಮಗುವಿಗೆ ತಾಯಿಯ ಎದೆ ಹಾಲು ಮೊದಲ ಲಸಿಕೆ ಇದ್ದಂತೆ ತಾಯಿಯ ಎದೆ ಹಾಲು ಅಮೃತಕ್ಕೆ ಸಮಾನ, ತಾಯಿಯ ಎದೆ ಹಾಲು ಮಾತ್ರ ಮಗುವಿಗೆ ಸಂಪೂರ್ಣ ಆಹಾರ ಇದು ಸುಲಭವಾಗಿ ಜೀರ್ಣವಾಗುವ ಸ್ವಚ್ಛ ಸುರಕ್ಷಿತ ಆಹಾರವಾಗಿದ್ದು, ಮಗುವಿನ ಬೆಳವಣಿಗೆಗೆ ಅತ್ಯವಶ್ಯಕ ಅಲ್ಲದೆ ತಾಯಿ ಮಗುವಿನ ಬಾಂಧವ್ಯ ಹೆಚ್ಚಿಸುತ್ತದೆ. ಮಗು ತಾಯಿಯನ್ನು ವಾಸನೆಯಿಂದ ಗುರುತಿಸುತ್ತದೆ. ತಾಯಿ ಸಮೀಪ ಮಗುವಿದ್ದರೆ ಬೌದ್ಧಿಕ ಮಟ್ಟ ಹೆಚ್ಚಿಸುತ್ತದೆ. ಇದರಿಂದ ಮಗುವಿನ ಹೃದಯದ ಸ್ಥಿತಿ ಉಸಿರಾಟದ ಸ್ಥಿತಿ ಸಹಜವಾಗಿ ಬರುತ್ತದೆ ಎಂದು ತಿಳಿಸಲಾಯಿತು.

ಮಗುವಿಗೆ ತಾಯಿ ಮಗುವಿಗೆ ಹಾಲುಣಿಸಲು ತನಗೆ ಅನುಕೂಲವಾದ ಭಂಗಿ ಅಳವಡಿಸಿಕೊಳ್ಳುವುದು ತಾಯಿಗೆ ಮಗುವನ್ನು ಯಾವ ರೀತಿಯಲ್ಲಿ ಮಲಗಿಸಿ ಕೊಳ್ಳಬೇಕು ಎಂದು ತಿಳುವಳಿಕೆ ನೀಡಲಾಯಿತು ಮಗುವಿನ ತುಟಿಗಳು ಅಗಲವಾಗಿ ತೆರೆದು ನಾಲಿಗೆ ಕೆಳಗಿರಬೇಕು ಮಗುವಿನ ಬಾಯಿಯೊಳಗೆ ಸ್ತನಗ್ರಹವು ಅಂದರೆ ಮಗು ಹಾಲನ್ನು ಎಳೆದು ಕೊಳ್ಳಲು ಅನುಕೂಲವಾಗುವಂತೆ ಇರಬೇಕು ಸ್ವಲ್ಪ ಹೊತ್ತು ಹಾಲು ಕುಡಿದು ಮಗು ಹಾಗೆ ಮಲಗಿ ಮತ್ತು ಎಚ್ಚರವಾದಾಗ ಎದೆ ಚೀಪಲು ಪ್ರಾರಂಭಿಸುತ್ತದೆ.

ಗಾಡ ನಿದ್ರೆ ಆವರಿಸಿದಾಗ ಮಗು ಎದೆ ಚೀಪುವುದನ್ನು ನಿಲ್ಲಿಸುತ್ತದೆ. ನಂತರ 6 ತಿಂಗಳಿಂದ 9 ತಿಂಗಳವರೆಗೆ ಎದೆ ಹಾಲು ಕೊಡುವುದನ್ನು ಮುಂದುವರಿಸಬೇಕು ಬೇಳೆ ಕಾಳುಗಳಿಂದ ತಯಾ-ರಿಸಿದ ಪೂರಕ ಆಹಾರ ಕೊಡಲು ಪ್ರಾರಂಭಿಸಿ ಆ ನಂತರ ತರಕಾರಿ ಮತ್ತು ಹಣ್ಣುಗಳನ್ನು ಸೇರಿಸಿ ಸ್ಥಳೀಯವಾಗಿ ದೊರಕುವ ತರಕಾರಿ ಹಣ್ಣು ಸೊಪ್ಪುಗಳನ್ನು ಬಳಸಿಕೊಳ್ಳಬೇಕು ಮಗುವಿಗೆ ಕೊಡುವ ಆಹಾರವನ್ನು ಕ್ರಮೇಣ ಹೆಚ್ಚಿಸಿ ಮಗುವಿಗೆ 9 ತಿಂಗಳು ತುಂಬುವ ವೇಳೆಗೆ ಅರ್ಧ ಬಟ್ಟಲು ಆಹಾರವನ್ನು ದಿನಕ್ಕೆ ನಾಲ್ಕು ಬಾರಿ ಕೊಡಿ ಸಮರ್ಪಕ ಬೆಳವಣಿಗೆಗೆ ನೆರವಾಗಲು ಮಗುವಿನ ಆಹಾರದಲ್ಲಿ ಒಂದು ಚಮಚೆಯಷ್ಟು ಎಣ್ಣೆ ತುಪ್ಪ ಸೇರಿಸಿ, ತಯಾರಿಸಿದ ಆಹಾರ 9 ನೇ ತಿಂಗಳದಿಂದ 12ನೇ ತಿಂಗಳವರೆಗೆ ಎದೆ ಹಾಲು ಕೊಡಬೇಕು ನಂತರ 1 ವರ್ಷದಿಂದ 2 ವರ್ಷದವರೆಗೆ ಎದೆ ಹಾಲು ಮುಂದುವರೆಸಬೇಕು. ಕುಟುಂಬದ ಇತರೆ ಸದಸ್ಯರಿಗೆ ತಯಾರಿಸಿದ ಹಾರವನ್ನೇ ಮಗು ಸೇವಿಸುವಂತಿರಬೇಕು ಎಂದು ತಿಳಿಸಿದರು.

ಈ ಸಭೆಯಲ್ಲಿ: ಅನ್ನಪೂರ್ಣ, ಗಂಗಮ್ಮ ಪಿಎಚ್ ಸಿಒ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ತಾಯಂದಿರು, ಹಾಗೂ ಗರ್ಭಿಣಿಯರು, ಸಾರ್ವಜನಿಕರು ಭಾಗವಹಿಸಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಅನಿಮೇಷನ್ (Animation)

ಅನಿಮೇಷನ್ (Animation) ಕೋರ್ಸ್ ಎನ್ನುವುದು ಚಲಿಸುವ ಚಿತ್ರಗಳು (Moving Images), ಕಾರ್ಟೂನ್‌ಗಳು, 2ಆ ಮತ್ತು 3ಆ ಪಾತ್ರಗಳು, ದೃಶ್ಯ ಪರಿಣಾಮಗಳು (VFX), ಗೇಮಿಂಗ್ ಗ್ರಾಫಿಕ್ಸ್ ಹಾಗೂ ಡಿಜಿಟಲ್ ಕಂಟೆಂಟ್‌ಗಳನ್ನು ಸೃಷ್ಟಿಸುವುದನ್ನು ಕಲಿಸುವ ಸೃಜನಾತ್ಮಕ ಶಿಕ್ಷಣವಾಗಿದೆ. ಸಿನಿಮಾ, ಟಿವಿ, ವೆಬ್ ಸೀರೀಸ್, ಜಾಹೀರಾತು, ಗೇಮಿಂಗ್, ಶಿಕ್ಷಣ ಮತ್ತು ಡಿಜಿಟಲ್ ಮೀಡಿಯಾ ಕ್ಷೇತ್ರಗಳಲ್ಲಿ ಅನಿಮೇಷನ್‌ಗೆ ಹೆಚ್ಚಿನ ಬೇಡಿಕೆಯಿದೆ.

ಪ್ರಮುಖ ಕೋರ್ಸ್‌ಗಳು

1. ಪದವಿ (Degree) ಕೋರ್ಸ್‌ಗಳು
- B.Sc Animation
- B.Sc Animation & VFX
- B.Des Animation
- B.A. Animation & Multimedia
- Bachelor in Digital Media

ಅವಧಿ: 3–4 ವರ್ಷಗಳು
ಅರ್ಹತೆ: ಪಿಯುಸಿ (10+2) ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ.

2. ಡಿಪ್ಲೊಮಾ ಕೋರ್ಸ್‌ಗಳು
- Diploma in Animation
- Diploma in 3D Animation
- Diploma in VFX
- Diploma in Multimedia

ಅವಧಿ: 6 ತಿಂಗಳು ? 2 ವರ್ಷಗಳು
ಅರ್ಹತೆ: ಖಖಐಅ ಅಥ–'ವಾ PUC (ಸಂಸ್ಥೆಯ ನಿಯಮಾನುಸಾರ).

3. ಪ್ರಮಾಣಪತ್ರ (Certificate) ಕೋರ್ಸ್‌ಗಳು
- Certificate in 2D Animation
- Certificate in 3D Animation
- Certificate in Graphic Design
- Certificate in Motion Graphics

ಅವಧಿ: 3?12 ತಿಂಗಳು.

ಕಲಿಯುವ ಪ್ರಮುಖ ವಿಷಯಗಳು
- 2D Animation
- 3D Animation
- Character Design
- Storyboarding
- Digital Illustration
- Modeling
- Texturing
- Rigging
- Lighting
- Rendering
- Motion Graphics
- Visual Effects (VFX)
- Video Editing
- Graphic Design
- Game Asset Design
- Camera Animation
- Sound Synchronization
- Portfolio Development

ಕಲಿಯುವ ಪ್ರಮುಖ ಸಾಫ್ಟ್‌ವೇರ್‌ಗಳು
- Autodesk Maya
- Blender
- Adobe Photoshop
- Adobe Illustrator
- Adobe After Effects
- Adobe Premiere Pro
- Autodesk 3ds Max
- ZBrush
- Substance Painter
- Unreal Engine
- Unity
- Toon Boom Harmony

ಅಗತ್ಯ ಕೌಶಲ್ಯಗಳು
– ಸೃಜನಶೀಲತೆ (Creativity)
– ಚಿತ್ರಕಲೆ ಮತ್ತು ಸ್ಕೆಚಿಂಗ್ ಕೌಶಲ್ಯ
– ಕಲ್ಪನಾ ಶಕ್ತಿ
– ಬಣ್ಣಗಳ ಅರಿವು
– ಕಥೆ ಹೇಳುವ ಕೌಶಲ್ಯ
– ಕಂಪ್ಯೂಟರ್ ಜ್ಞಾನ
– ತಂಡದೊಂದಿಗೆ ಕೆಲಸ ಮಾಡುವ ಸಾಮರ್ಥ್ಯ
– ಸಮಯ ನಿರ್ವಹಣೆ

ಉದ್ಯೋಗಾವಕಾಶಗಳು

ಕೋರ್ಸ್ ಪೂರ್ಣಗೊಳಿಸಿದ ನಂತರ ಈ ಹುದ್ದೆಗಳಲ್ಲಿ ಕೆಲಸ ಮಾಡಬಹುದು:
- 2D Animator
- 3D Animator
- VFX Artist
- Motion Graphics Designer
- Character Designer
- Game Artist
- Graphic Designer
- Multimedia Designer
- Video Editor
- Storyboard Artist
- Lighting Artist
- Rendering Artist
- Rigging Artist
- Texture Artist
- Compositor
- CGI Artist
- UI/UX Designer
- Digital Content Creator
- Freelance Animator

ಉದ್ಯೋಗ ಕ್ಷೇತ್ರಗಳು
– ಚಲನಚಿತ್ರ (Film Industry)
– ದೂರದರ್ಶನ (Television)
- OTT ವೇದಿಕೆಗಳು
– ಜಾಹೀರಾತು ಸಂಸ್ಥೆಗಳು
– ಗೇಮಿಂಗ್ ಕಂಪನಿಗಳು
– ಅನಿಮೇಷನ್ ಸ್ಟುಡಿಯೋಗಳು
– ಗಿಈಫ಼ಿ ಸ್ಟುಡಿಯೋಗಳು
– ವೆಬ್ ಡಿಸೈನ್ ಕಂಪನಿಗಳು
– ಇ–ಲರ್ನಿಂಗ್ ಸಂಸ್ಥೆಗಳು
– ಡಿಜಿಟಲ್ ಮಾರ್ಕೆಟಿಂಗ್ ಕಂಪನಿಗಳು
– ಮೀಡಿಯಾ ಮತ್ತು ಮನರಂಜನಾ ಸಂಸ್ಥೆಗಳು

ಉನ್ನತ ಶಿಕ್ಷಣ
- M.Sc Animation
- M.Des Animation
- M.A Animation
- PG Diploma in Animation & VFX
- Advanced VFX Certification
- Game Design Courses
- AR/VR Development Courses

ಸಂಬಳ (Salary)
– ಫ್ರೆಶರ್: 2.5 ಲಕ್ಷ 5 ಲಕ್ಷ ವಾರ್ಷಿಕ
– 2–5 ವರ್ಷ ಅನುಭವ: ?5 ಲಕ್ಷ 10 ಲಕ್ಷ ವಾರ್ಷಿಕ
– ಅನುಭವಿಗಳಾದ ತಜ್ಞರು: ?10 ಲಕ್ಷ 20 ಲಕ್ಷ+ ವಾರ್ಷಿಕ

ಫ್ರೀಲಾನ್ಸಿಂಗ್, ಯೂಟ್ಯೂಬ್, ಗೇಮ್ ಡೆವಲಪ್‌ಮೆಂಟ್ ಹಾಗೂ ವಿದೇಶಿ ಕಂಪನಿಗಳೊಂದಿಗೆ ಕೆಲಸ ಮಾಡುವ ಮೂಲಕ ಇನ್ನೂ ಹೆಚ್ಚಿನ ಆದಾಯ ಗಳಿಸಬಹುದು.

ಭಾರತದ ಪ್ರಮುಖ ಅನಿಮೇಷನ್ ತರಬೇತಿ ಸಂಸ್ಥೆಗಳು
- Arena Animation
- MAAC (Maya Academy of Advanced Creativity)
- Frameboxx Animation
- Picasso Animation College
- Zee Institute of Creative Art (ZICA)
- National Institute of Design (NID)
- Industrial Design Centre (IDC), IIT Bombay

ಯಾರಿಗೆ ಈ ಕೋರ್ಸ್ ಸೂಕ್ತ?
– ಚಿತ್ರಕಲೆ ಮತ್ತು ವಿನ್ಯಾಸದಲ್ಲಿ ಆಸಕ್ತಿ ಇರುವವರಿಗೆ
– ಕಾರ್ಟೂನ್ ಮತ್ತು ಗೇಮಿಂಗ್ ಪ್ರಿಯರಿಗೆ
– ಸೃಜನಾತ್ಮಕವಾಗಿ ಹೊಸದನ್ನು ರಚಿಸಲು ಇಚ್ಛಿಸುವವರಿಗೆ
– ಸಿನಿಮಾ, ಗಿಈಫ಼ಿ ಮತ್ತು ಡಿಜಿಟಲ್ ಮೀಡಿಯಾ ಕ್ಷೇತ್ರದಲ್ಲಿ ವೃತ್ತಿ ನಿರ್ಮಿಸಲು ಬಯಸುವವರಿಗೆ

ಸಾರಾಂಶ: ಅನಿಮೇಷನ್ ಕೋರ್ಸ್ ಸೃಜನಶೀಲತೆ ಮತ್ತು ತಂತ್ರಜ್ಞಾನವನ್ನು ಒಟ್ಟುಗೂಡಿಸುವ ಉತ್ತಮ ವೃತ್ತಿಪರ ಕೋರ್ಸ್ ಆಗಿದ್ದು, ಭಾರತ ಹಾಗೂ ವಿದೇಶಗಳಲ್ಲಿ ಉತ್ತಮ ಉದ್ಯೋಗ ಮತ್ತು ಸ್ವಯಂ ಉದ್ಯೋಗ ಅವಕಾಶಗಳನ್ನು ಒದಗಿಸುತ್ತದೆ.

# ಅಂಬೇಡ್ಕರ್ ವಸತಿ ನಿಲಯದ 13 ವಿದ್ಯಾರ್ಥಿನಿಯರು ಅಸ್ತವ್ಯಸ್ತ ಆಸ್ಪತ್ರೆಗೆ ದಾಖಲು!

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕಳೆದ ವಾರ ಮೊರಾರ್ಜಿ ವಸತಿ ನಿಲಯದ ಮಕ್ಕಳು ಅಸ್ತವ್ಯಸ್ತದ ದುರ್ಘಟನೆ ಮಾಸುವ ಮುನ್ನವೇ ಇಂದು ಆ.4 ರಂದು ಮತ್ತೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದ 13 ವಿದ್ಯಾರ್ಥಿನಿಯರು ಬೆಳಗಿನ ಉಪಹಾರ ಸೇವೆಸಿ ಅಸ್ತವ್ಯಸ್ತಗೊಂಡು ತಾಯಿ–ಮಕ್ಕಳ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದ ಘಟನೆ ಜರುಗಿದೆ.**

ನಗರ ಪೊಲೀಸ್ ಠಾಣೆ ಎದುರುಗಡೆಯಿರುವ ಡಾ.ಬಿ.ಆರ್.ಅಂಬೇಡ್ಕರ್ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಯರ ವಸತಿ ನಿಲಯದ 13 ವಿದ್ಯಾರ್ಥಿಗಳು ಅಸ್ತವ್ಯಸ್ತರಾಗಿ ತಾಯಿ–ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವಾಪಸ್ ವಸತಿ ನಿಲಯಕ್ಕೆ ಬಂದಿದ್ದಾರೆ. ಬೆಳಿಗ್ಗೆ ಚಪಾತಿ, ಅನ್ನ, ಸಂಬಾರ, ಸೇವಿಸಿದ ಹಲವಾರು



ಮಕ್ಕಳಲ್ಲಿ 13 ಮಕ್ಕಳು ಮಾತ್ರ ಹೊಟ್ಟೆನೋವು, ತಲೆಸುತ್ತು ಬಂದು ಅಸ್ತವ್ಯಸ್ತಗೊಂಡಿದ್ದರು. ತಕ್ಷಣ ಚಿಕಿತ್ಸೆ ಕೊಡಿಸಿದ ಬಳಿಕ ಗುಣಮುಖರಾಗಿದ್ದಾರೆ. ವಸತಿ ನಿಲಯದ ವಾರ್ಡನ್ ಶೋಭಾ ರಜೆಯಲ್ಲಿದ್ದಾರೆ ನಾನೇ ನೋಡಿಕೊಳ್ಳುತ್ತಿದ್ದೇನೆ, ಅಡುಗೆಯವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ತಂದಿರುವ ಅಕ್ಕಿಯಲ್ಲಿ ಏನಾದರೂ ಸಮಸ್ಯೆಯಿದ್ದರೆ ಬದಲಾಯಿಸುವೆ ಎಂದು ಪ್ರಭಾರಿ ತಾಲೂಕು ಅಧಿಕಾರಿ ನಟರಾಜ ಹೇಳಿದರು.

ಒಟ್ಟಿನಲ್ಲಿ ವಸತಿ ನಿಲಯದ ಅಧಿಕಾರಿಗಳ ಮತ್ತು ಅಡುಗೆ ಮಾಡುವವರು ಹೊಂದಾಣಿಕೆ ಇಲ್ಲದ ಕಾರಣ ಹೀಗಾಗುತ್ತಿರಬಹುದು ಎಂದು ವಸತಿ ನಿಲಯದ ವಿದ್ಯಾರ್ಥಿನಿಯರು ತಿಳಿಸಿದರು. ಶಾಸಕರು ನಗರಸಭೆ ಸಭಾಂಗಣದಲ್ಲಿ ವಸತಿ ನಿಲಯಗಳ ಅಧಿಕಾರಿಗಳನ್ನು ಕರೆದು ಎಚ್ಚ–ರಿಕೆ ಕೊಟ್ಟರು ಕೂಡ ಮತ್ತೆ ಮತ್ತೆ ವಸತಿ ನಿಲಯದ ಸಮಸ್ಯೆ ತಲೆದೂರುತ್ತಿದೆ.

ಘಟನೆಯ ವಿಷಯ ತಿಳಿದು ಮಾಜಿ ಸಚಿವ ಹಾಗೂ ಕೆಓಎಫ್ ರಾಜ್ಯಾಧ್ಯಕ್ಷರಾದ ವೆಂಕಟರಾವ್ ನಾಡಗೌಡ, ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ ಭೇಟಿ ನೀಡಿ ವಿದ್ಯಾರ್ಥಿನಿಯರ ಆರೋಗ್ಯ ವಿಚಾರಿಸಿ ಸೂಕ್ತ ಚಿಕಿತ್ಸೆ ಕೊಡಲು ವೈದ್ಯರಿಗೆ ತಿಳಿಸಿದರು. ಚಿಕಿತ್ಸೆ ಪಡೆದು ವಿದ್ಯಾರ್ಥಿನಿಯರು ವಸತಿ ನಿಲಯಕ್ಕೆ ವಾಪಸ್ಸಾಗಿದ್ದಾರೆ.

# ಕೃಷ್ಣನದಿಗೆ 1.45 ಲಕ್ಷ ಕ್ಯೂಸೆಕ್ ನೀರು ಪ್ರವಾಹ ಭೀತಿ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಧಾರಾಕಾರ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಆಲಮಟ್ಟಿ ಜಲಾಶಯದಿಂದ ಹೆಚ್ಚಿನ ಪ್ರಮಾಣದಲ್ಲಿ ಬಸವಸಾಗರ ಜಲಾಶಯಕ್ಕೆ ನೀರು ಹರಿದು ಬರುತ್ತಿದೆ. ಕೃಷ್ಣಾನದಿಗೆ 29 ಕ್ರಸ್ಟ್‌ಗೇಟ್‌ಗಳ ಮೂಲಕ 1.45,376 ಲಕ್ಷ ಕ್ಯುಸೆಕ್ ನೀರನ್ನು ಹ–ರಿಬಿಡಲಾಗುತ್ತಿದ್ದು, 1.40 ಲಕ್ಷ ಕ್ಯೂಸೆಕ್ ನೀರಿನ ಹೊರಹರಿವು ಇಂದು ಮತ್ತೆ ಹೆಚ್ಚಿದ್ದು,**

ಇದರಿಂದ ನದಿ ತೀರದ ಹತ್ತಾರು ಗ್ರಾಮಗಳು, ದೊಡ್ಡಿಗಳ ಜನರಲ್ಲಿ ಪ್ರವಾಹ ಭೀತಿ ಎದು ರಾಗಿದೆ. ನದಿಗೆ ಅಡ್ಡಲಾಗಿ ಶೀಲಹಳ್ಳಿ ಮತ್ತು ಹಂಚಿನಾಳ ಮಧ್ಯ ನಿರ್ಮಿಸಲಾದ ಸೇತುವೆ ಮುಳುಗಡೆಗೆ ಕೆಲವೇ ಅಡಿಗಳ ಬಾಕಿಯಿದ್ದು, ನದಿಯ ನೀರಿನ ಹೊರ ಹರಿವು ಪ್ರಮಾಣ 1.60ಲಕ್ಷ ಕ್ಯೂಸೆಕ್ ದಾಟಿದರೆ, ನಡುಗಡ್ಡೆ ಪ್ರದೇಶದ ಜಲದುರ್ಗ, ಹಂಚಿನಾಳ, ಯಳಗುಂದಿ, ಯರಗೋಡಿ, ಕಡದರಗಡ್ಡಿ ಗ್ರಾಮಗಳು ತಾಲ್ಲೂಕು ಕೇಂದ್ರದ ಸಂಪರ್ಕ ಕಳೆದು ಕೊಳ್ಳುವುದು ಜಲದುರ್ಗದ ಮಾರ್ಗವಾಗಿ ಸುಮಾರು 45ಕಿ.ಮೀ ಸುತ್ತುವರೆದು ತಾಲುಕು ಕೇಂದ್ರ ತಲುಪುವ ಅನಿವಾರ್ಯತೆ ಎದುರಾಗಲಿದೆ.

ಆಲಮಟ್ಟಿ ಅಣೆಕಟ್ಟೆಯಿಂದ 1.30 ಲಕ್ಷ ಕ್ಯೂಸೆಕ್ ಒಳಹರಿವು ಬಸವಸಾಗರ ಜಲಾಶಯದ ದಿಂದ ಕೃಷ್ಣಾ ನದಿ ಗೆ 29 ಮುಖ್ಯ ಕ್ರಸ್ಟ ಗೇಟ್ ಗಳ ಮೂಲಕ 1.45.376 ಲಕ್ಷ ಕ್ಯೂಸೆಕ್ ನೀರು ಹೊರ ಹ–ರಿವು, ಗರಿಷ್ಠ 432.25 ಮೀ ನೀರು ಸಂಗ್ರಹ ಮಟ್ಟದ ಜಲಾಶಯದಲ್ಲಿಗೆ ಇದೀಗ 491.40 ಮೀ.ನೀರು ಸಂಗ್ರಹವಾಗಿದ್ದು, ಗರಿಷ್ಠ 33.313



ಟಿಎಂಸಿ ನೀರು ಸಂಗ್ರಹದ ಜಲಾಶಯದಲ್ಲಿಗ 29.48, ಟಿಎಂಸಿ ನೀರು ಸಂಗ್ರಹವಿದೆ. ನಾರಾಯಣಪುರ ಜಲಾಶಯದಿಂದ 1.45 ಲಕ್ಷ ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದೆ. ಇದರಿಂದ ಕೃಷ್ಣಾನದಿ ಮೈದುಂಬಿ ಹ–ರಿಯುತ್ತಿದ್ದು, ದೇವದುರ್ಗದ ಗಡ್ಡೆಗೂಳಿ ಬಸವೇಶ್ವರ ದೇವಾಲಯ ಮುಳುಗಡೆಯಾಗಿದೆ. ಮಹಾರಾಷ್ಟ್ರದಲ್ಲಿ ಭಾರೀ ಮಳೆಯ ಪರಿಣಾಮ ಕೊಯ್ನಾ ಜಲಾಶಯಕ್ಕೆ ಅಪಾರ ಪ್ರಮಾಣದ ಒಳಹರಿವು ಬರುತ್ತಿದೆ. ಇದ–ರಿಂದಾಗಿ ಭಾರೀ ಪ್ರಮಾಣದ ನೀರನ್ನು ನದಿಗೆ ಬಿಡುಗಡೆ ಮಾಡಲಾಗಿದ್ದು, ನಾರಾಯಣಪುರ ಜಲಾಶಯದ ಒಳಹರಿವು ಹೆಚ್ಚಳವಾಗಿದೆ.

# ಜಾಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಾದಕ ವಸ್ತು ವಿರೋಧಿ ಜಾಗೃತಿ ಜಾಥಾ

❑ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳು ಹಾಗೂ ಡ್ರಗ್ಸ್ ಮತ್ತು ಎನ್.ಡಿ.ಪಿ.ಎಸ್. ಕಾಯ್ದೆಯ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಜಾಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜಾಗೃತಿ ಜಾಥಾವನ್ನು ಆಯೋಜಿಸಲಾಯಿತು.**

ಈ ಜಾಗೃತಿ ಕಾರ್ಯಕ್ರಮದಲ್ಲಿ ದೇವದುರ್ಗಾ ಗ್ರಾಮೀಣ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಪಿ.ಐ) ಹಾಗೂ ಜಾಲಹಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು (ಪಿ.ಎಸ್.ಐ) ವಿದ್ಯಾರ್ಥಿಗಳೊಂದಿಗೆ ಜಾಥಾದಲ್ಲಿ ಭಾಗವಹಿಸಿ, ಮಾದಕ ವಸ್ತುಗಳ ಬಳಕೆಯಿಂದ ವ್ಯಕ್ತಿಯ ಆರೋಗ್ಯ, ಶಿಕ್ಷಣ, ಕುಟುಂಬ ಮತ್ತು ಸಮಾಜದ ಮೇಲೆ ಉಂಟಾಗುವ ಗಂಭೀರ ದುಷ್ಪರಿಣಾಮಗಳ ಕುರಿತು ಮಾಹಿತಿ ನೀಡಿದರು.

ಮಾದಕ ವಸ್ತುಗಳ ಸೇವನೆಯು



ಯುವಜನರ ಭವಿಷ್ಯವನ್ನು ಹಾಳುಮಾಡುವುದರ ಜೊತೆಗೆ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ವಿದ್ಯಾರ್ಥಿಗಳು ದುಷ್ಚಟಗಳಿಂದ ದೂರವಿದ್ದು, ಉತ್ತಮ ಶಿಕ್ಷಣ, ಕ್ರೀಡೆ ಹಾಗೂ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಅಧಿಕಾರಿಗಳು ತಿಳಿಸಿದರು.

ಡ್ರಗ್ಸ್ ಸೇವನೆ, ಸಾಗಾಟ, ಸಂಗ್ರಹಣೆ, ಮಾರಾಟ ಹಾಗೂ ಇತರ ಕಾನೂನುಬಾಹಿರ ಚಟುವಟಿಕೆಗಳು ಮಾದಕ ದ್ರವ್ಯಗಳು ಮತ್ತು ಮನೋಪ್ರಭಾವಿ ವಸ್ತುಗಳ ಕಾಯ್ದೆ (ಎನ್.ಡಿ.ಪಿ.ಎಸ್. ಕಾಯ್ದೆ) ಅಡಿಯಲ್ಲಿ ಗಂಭೀರ ಅಪರಾಧಗಳಾಗಿದ್ದು, ಇಂತಹ ಕೃತ್ಯಗಳಲ್ಲಿ ಭಾಗಿಯಾಗುವವರಿಗೆ ಕಠಿಣ ಕಾನೂನು ಕ್ರಮ ಹಾಗೂ ಶಿಕ್ಷೆ ವಿಧಿಸಲಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಜಾಥಾದ ಸಂದರ್ಭದಲ್ಲಿ ವಿದ್ಯಾರ್ಥಿಗಳು ಮಾದಕ ವಸ್ತು ವಿರೋಧಿ ಘೋಷಣೆಗಳನ್ನು ಕೂಗಿ, "ಮಾದಕ ವಸ್ತುಗಳಿಗೆ ಇಲ್ಲ ಹೇಳೋಣ ? ಆರೋಗ್ಯಕರ ಸಮಾಜ ನಿರ್ಮಿಸೋಣ", "ಡ್ರಗ್ಸ್ ಮುಕ್ತ ಯುವಜನತೆ ? ಸುರಕ್ಷಿತ ಭವಿಷ್ಯ" ಎಂಬ ಸಂದೇಶಗಳನ್ನು ಸಾರ್ವಜನಿಕರಿಗೆ ತಲುಪಿಸಿದರು.


ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ, ಸಮಾಜವನ್ನು ಮಾದಕ ವ್ಯಸನದಿಂದ ಮುಕ್ತಗೊಳಿಸಲು ಪ್ರತಿಯೊಬ್ಬರೂ ಸಹಕರಿಸಬೇಕು ಎಂದು ಪೊಲೀಸ್ ಅಧಿಕಾರಿಗಳು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಪೊಲೀಸ್ ಸಿಬ್ಬಂದಿ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಸಿಂಧನೂರಿನಲ್ಲಿ ನಿರಂತರ ಅಘೋಷಿತ ವಿದ್ಯುತ್ ಕಡಿತ – ಜೆಸ್ಕಾಂಗೆ ಸಮಾಜ ಸೇವಕ ಉಸ್ಮಾನ್ ಪಾಷಾ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಮಸ್ತ ಸಿಂಧನೂರು ನಗರ ಹಾಗೂ ಗ್ರಾಮೀಣ ಪ್ರದೇಶದ ಸಾರ್ವಜನಿಕ ಹಿತಾಸಕ್ತಿಯಿಂದ, 'ಶ್ರೀ ಷಾ ಮಕಂದಾರ್ ಜನಪರ ಸೇವಾ ಸಮಿತಿ'ಯ ಸಮಾಜ ಸೇವಕರಾದ ಉಸ್ಮಾನ್ ಪಾಷಾ ಷಾ ಮಕಂದಾರ್ ಅವರು ಜೆಸ್ಕಾಂ (GESCOM) ವಿಭಾಗದ ಮಾನ್ಯ ಎ.ಇ.ಇ (AEE) ಅವರಿಗೆ ಮನವಿ ಪತ್ರ ಸಲ್ಲಿಸಿ, ಕೂಡಲೇ ಅಘೋಷಿತ ವಿದ್ಯುತ್ ಲೋಡ್ ಶೆಡ್ಡಿಂಗ್ ಅನ್ನು ನಿಲ್ಲಿಸುವಂತೆ ಒತ್ತಾಯಿಸಿದ್ ದಾರೆ.**

ಕಳೆದ 3–4 ತಿಂಗಳಿಂದ ಸಿಂಧನೂರು ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಜೆಸ್ಕಾಂ ವತಿಯಿಂದ ನಿತ್ಯವೂ ದಿನಕ್ಕೆ ಕನಿಷ್ಠ ಎರಡು ಗಂಟೆಗಳಿಗೂ ಹೆಚ್ಚು ಕಾಲ ಅಘೋಷಿತ ವಿದ್ಯುತ್



ಕಟ್ ಮಾಡಲಾಗುತ್ತಿದ್ದು, ಇದರಿಂದ ಸಾರ್ವಜನಿಕರು ಹಾಗೂ ವಿವಿಧ ವರ್ಗದ ಜನರು ಎದು–ರಿಸುತ್ತಿರುವ ಪ್ರಮುಖ ಸಮಸ್ಯೆಗಳು ಹೀಗಿವೆ: ಗ್ಯಾರೇಜ್, ಕಂಪ್ಯೂಟರ್ ಸೆಂಟರ್, ಪ್ರಿಂಟಿಂಗ್ ಪ್ರೆಸ್, ಆನ್‌ಲೈನ್ ಸೆಂಟರ್‌ಗಳು ಸೇ–ರಿದಂತೆ ವಿದ್ಯುತ್ ಅವಲಂಬಿತ ಎಲ್ಲಾ ಸಣ್ಣ ವ್ಯಾಪಾರಸ್ಥರು ಮತ್ತು ದೈನಂದಿನ ಕೂಲಿ ಕಾರ್ಮಿಕರ ಬದುಕು ದುಸ್ತರಗೊಂಡಿದೆ.

ಹಗಲು ಮತ್ತು ರಾತ್ರಿ ಎನ್ನದೆ ವಿದ್ಯುತ್ ಕಡಿತವಾಗುತ್ತಿರುವುದರಿಂದ ದುಡಿಮೆಯ ಅರ್ಧ ಸಮಯ ಹಾಳಾಗುತ್ತಿದೆ. ವಿದ್ಯಾರ್ಥಿಗಳಿಗೆ ಸರಿಯಾಗಿ ಓದಲು ಮತ್ತು ಹೋಂವರ್ಕ್ ಮಾಡಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದು ಅವರ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ವಿಪರೀತ ಸೊಳ್ಳೆ ಕಾಟದಿಂದಾಗಿ ಮನೆಗಳಲ್ಲಿ ವೃದ್ಧರು, ಮಕ್ಕಳು ಹಾಗೂ ರೋಗಗ್ರಸ್ಥರು ನಿದ್ರೆ ಮಾಡಲು ಮತ್ತು ವಿಶ್ರಾಂತಿ ಪಡೆಯಲು ಪರದಾಡುವಂತಾಗಿದೆ.

ಆಸ್ಪತ್ರೆಗಳಲ್ಲಿ ಸ್ಕ್ಯಾನಿಂಗ್, ಇಸಿಜಿ ಮತ್ತು ಇತರೆ ತುರ್ತು ಪರೀಕ್ಷೆಗಳಿಗಾಗಿ ರೋಗಿಗಳು ಗಂಟೆಗಟ್ಟಲೆ ಕ್ಯೂ ನಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಇದೆ. ಬಡ ಹಾಗೂ ಮಧ್ಯಮ ವರ್ಗದ ಜನರು ದಿನದ ದುಡಿಮೆ ಕಳೆದುಕೊಳ್ಳುತ್ತಿದ್ದು, ಈಗಾಗಲೇ ಸಾಲ ಮಾಡಿಕೊಂಡಿರುವವರು ಅದನ್ನು ತೀರಿಸಲಾಗದೆ ಮತ್ತಷ್ಟು ಸಾಲದ ಶೂಲಕ್ಕೆ ಸಿಲುಕುವಂತಾಗಿದೆ. ಸಾರ್ವಜನಿಕರು ಅನುಭವಿಸುತ್ತಿರುವ ಈ ಎಲ್ಲಾ ಗಂಭೀರ ಸಮಸ್ಯೆಗಳನ್ನು ಜೆಸ್ಕಾಂ ಅಧಿಕಾ–ರಿಗಳು ಕೂಡಲೇ ಪರಿಗಣಿಸಿ, ಸಿಂಧನೂರು ನಗರ ಹಾಗೂ ಗ್ರಾಮೀಣ ಪ್ರದೇಶವನ್ನು ಅಘೋಷಿತ ವಿದ್ಯುತ್ ಲೋಡ್ ಶೆಡ್ಡಿಂಗ್ ಬಾದೆಯಿಂದ ಮುಕ್ತಗೊಳಿಸಬೇಕು ಎಂದು ಉಸ್ಮಾನ್ ಪಾಷಾ ಷಾ ಮಕಂದಾರ್ ಅವರು ಆಗ್ರಹಿಸಿದ್ದಾರೆ.

# ಶಾರದ ವಿದ್ಯಾಮಂದಿರ ಪಿಯು ಕಾಲೇಜಿನಲ್ಲಿ ಮಾದಕ ವಸ್ತು ವಿರೋಧಿ ಜಾಗೃತಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸ್ಗೂರು: ಯುವಜನರು ಮತ್ತು ವಿದ್ಯಾರ್ಥಿಗಳಲ್ಲಿ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವ ಹಾಗೂ ಮಾದಕ ವಸ್ತುಗಳ ಬಳಕೆಯನ್ನು ತಡೆಯುವ ಉದ್ದೇಶದಿಂದ ಲಿಂಗಸ್ಗೂರು ಪೊಲೀಸ್ ಠಾಣಾ ವ್ಯಾಪ್ತಿಯ ಶಾರದ ವಿದ್ಯಾಮಂದಿರ ಪಿಯು ಕಾಲೇಜಿನಲ್ಲಿ ಮಾದಕ ವಸ್ತು ವಿರೋಧಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.**

ಕಾರ್ಯಕ್ರಮದಲ್ಲಿ ಪೊಲೀಸ್ ಅಧಿಕಾ–ರಿಗಳು ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಉಂಟಾಗುವ ಗಂಭೀರ ಪರಿಣಾಮಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು. ಮಾದಕ ವ್ಯಸನವು ವ್ಯಕ್ತಿಯ ಆರೋಗ್ಯವನ್ನು ಹಾಳುಮಾಡುವುದರ ಜತೆಗೆ ಶಿಕ್ಷಣ, ವ್ಯಕ್ತಿತ್ವ, ಕುಟುಂಬ, ಆರ್ಥಿಕ ಸ್ಥಿತಿ ಹಾಗೂ ಸಾಮಾಜಿಕ ಜೀವನದ ಮೇಲೂ ದುಷ್ಪ–ರಿಣಾಮ ಬೀರುತ್ತದೆ ಎಂದು ತಿಳಿಸಿದರು. ವಿದ್ಯಾರ್ಥಿ ಜೀವನವು ಭವಿಷ್ಯ ರೂಪಿಸಿಕೊಳ್ಳುವ ಮಹತ್ವದ ಹಂತವಾಗಿದ್ದು, ಈ ಸಮಯದಲ್ಲಿ ಕೆಟ್ಟ




ಸಹವಾಸ, ಸ್ನೇಹಿತರ ಒತ್ತಡ, ತಪ್ಪು ಪ್ರಲೋಭನೆ ಅಥವಾ ಕುತೂಹಲದಿಂದ ಮಾದಕ ವಸ್ತುಗಳ ಬಳಕೆಗೆ ಒಳಗಾಗಬಾರದು. ವಿದ್ಯಾರ್ಥಿಗಳು ಸದಾ ಜಾಗೃತರಾಗಿದ್ದು, ಡ್ರಗ್ಸ್ ಹಾಗೂ ಇತರ ದುಷ್ಚಟಗಳಿಂದ ದೂರವಿರಬೇಕು ಎಂದು ಸಲಹೆ ನೀಡಲಾಯಿತು.

ಮಾದಕ ವಸ್ತುಗಳ ಸೇವನೆ, ಅಕ್ರಮ ಸಾಗಾಟ, ಸಂಗ್ರಹಣೆ, ಮಾರಾಟ ಹಾಗೂ ವಿತರಣೆ ಸೇರಿದಂತೆ ಇತರ ಕಾನೂನುಬಾಹಿರ ಚಟುವಟಿಕೆಗಳು ಮಾದಕ ದ್ರವ್ಯಗಳು ಮತ್ತು ಮನೋಪ್ರಭಾವಿ ವಸ್ತುಗಳ ಕಾಯ್ದೆ (ಎನ್.ಡಿ.ಪಿ.ಎಸ್. ಕಾಯ್ದೆ) ಅಡಿಯಲ್ಲಿ ಗಂಭೀರ ಅಪರಾಧಗಳಾಗಿವೆ. ಇಂತಹ ಕೃತ್ಯಗಳಲ್ಲಿ ಭಾಗಿಯಾಗುವವರ ವಿರುದ್ಧ ಕಾಯ್ದೆಯನ್ವಯ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.

ಮಾದಕ ವಸ್ತುಗಳ ಬಳಕೆ ಅಥ–'ವಾ ಅಕ್ರಮ ಚಟುವಟಿಕೆಗಳ ಕುರಿತು ಮಾಹಿತಿ ದೊರೆತಲ್ಲಿ ಅದನ್ನು ಮರೆಮಾಚದೆ ಸಂಬಂಧಪಟ್ಟ ಪೊಲೀಸ್ ಇಲಾಖೆಗೆ ತಿಳಿಸಬೇಕು. ವಿದ್ಯಾರ್ಥಿಗಳು ತಮ್ಮ ಸ್ನೇಹಿತರು ಹಾಗೂ ಕುಟುಂಬದ ಸದಸ್ಯರಲ್ಲಿಯೂ ಮಾದಕ ವಸ್ತುಗಳ ದುಷ್ಪ–ರಿಣಾಮಗಳ ಕುರಿತು ಅರಿವು ಮೂಡಿಸುವ ಮೂಲಕ ಮಾದಕ ವ್ಯಸನ ಮುಕ್ತ ಸಮಾಜ ನಿರ್ಮಾಣ–ಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಲಾಯಿತು.

ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಕ್ರೀಡೆ, ಸಾಂಸ್ಕೃತಿಕ ಮತ್ತು ಸಮಾಜಮುಖಿ ಚಟುವಟಿ–ಕೆಗಳಲ್ಲಿ ತೊಡಗಿಸಿಕೊಂಡು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಆರೋಗ್ಯಕರ ಮತ್ತು ಸುರಕ್ಷಿತ ಸಮಾಜ ನಿರ್ಮಾಣದಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕರು, ಪೊಲೀಸ್ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸುವ ಸಂಕಲ್ಪ ಕೈಗೊಂಡರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101